Azim Premji Foundation

ಬಯಲು Bayalu

....a space of our own

Karnataka Field Institutes February2014 Issue No.: 18

A life time journey!

Selva

Last year, I visited the Himalayan range. In particular, I went to Kailash and Mansarovar, now in China. There are reams and reams of pages written about Kailash Yatra, both by eastern and western travelers. And just like every other traveler, I continue to be fascinated about this place. I stayed there only for few days, but the experience seemed ‘once-a-lifetime’.

Although there is much religious significance attached to this journey by many ancient religions in the world, I had no such ambition, nor did I have a typical ‘tourist’ motives. I just wanted to visit the mountains and experience the place. It was one of the most adventurous yet the most calming experience. I took the China route to reach Himalayas (Bangalore – Delhi – Nepal – Tibet – China – Himalayas). I was fascinated to see that we used all kinds of transport modes to get there; from the most advance mode of taking flights, to the most ancient mode of riding on a yak! Words fail when I attempt to describe my experience here, but I can tell one thing for sure – this place is quite a paradise with nature and people at its best. Let me elaborate.

Close your eyes, and imagine this - Bright Sun, incessant rain, sounds of the wind, flowing water, shivering cold weather, endlessly spread mountains, hovering clouds moving in slow motion, clear blue sky, shining lakes spotted even from far far away, the long mountain trails up the mountain (humans looking like small ants) – if you’ve seen this, you’ve seen a wee bit of Kailash. The experience with nature here is intimate and memorable. For example, sound and rain experience was an unforgettable one.

- Sound - I noticed that the sound travelled everywhere in that region; A smallest of noise was echoing everywhere. While being inside tents, I could hear conversations



from nearby tents; it was possible to chat easily with people in other tents even without having to move out of the tents (except the times, when rain decided to talk in its loudest decibels).

- Rain - The rain felt fiercer particularly when inside the tent, as tent sheets made for a big noise with every drop of rain. I had not experienced rain like this ever before. I felt as though I was right in the middle of a downpour, with loud noise constantly drumming in my ears; my hands, my nose tip touching the wet rained tent sheets whenever I tossed in the sleeping bag. With all this sensory, I felt fully wet in the rain, yet completely untouched by the rain. An experience with the rain, I'll never forget. I continue to be amazed whenever I heard the rain next, after returned home. Till date, the sounds of rain take me back to my tent experience in Mansarovar, and I experience that 'wet yet dry' rain phenomena all over again.

Just the sheer broad space of the earth, so broad that one quick glance straight ahead and you'd find a panoramic view of the wide sky, deep blue lake, green mountain space. A view that is spell-bound and unbelievable. I see why this place attracts travelers from all over the world!

The other thing that touches the heart of every traveler is the warmth of people there. The people in Tibet are followers of Budhism, a religion all about kind heart and compassion.

Life in the region is one of the hardest, with no easy means to earn, and almost cut off from the rest of the busy world. Despite the difficult life, the locals usually are cheerful, smiling, humming songs, waving at the visitors and generally upbeat. I see them constantly circling their prayer wheel all the time, peacefully reciting a sacred verse or something. I wonder what makes them so warm and friendly; perhaps the terrain is so hard that one has to depend on each other for a peaceful living, and they seem to be naturally oriented to spirituality; all of it making them to treat each other kindly and value the warmth of relationships.

A sense of gratitude and respect got multi-folded, when I saw Sherpas at work. Dorjee (a Sherpa) was the first ones to wake up before all of us, and the last one to go to sleep. He carries heavy weights, strides ahead of us, and if need be, comes back all the way and holds hands to lead the way. He greets me warm at every meal time, enquires about my health and forces me to eat well. In the entire journey, I saw him running around or helping out with something, I rarely saw him eat or rest or just hang around. Like other Sherpas, he is not only warm, but always cheerful and sings amazingly enjoyable Nepali songs. None of them have stepped out of their country, led very simple life, work hard and run their family with meagre income. These mountains and abundant nature is an everyday affair to them and such a part of their life. I wonder if they've become numb to their miraculous surroundings. Dorjee told me once that, travelers most always don't remember their names once the journey is over. From then on, I continued to address him by his name, and he did the same with me. A simple gesture we can follow, when we interact with people who help us in the journey. Coming back to Dorjee, he is fun, loves Prabhu Deva (the famous dancer), can give Michael Jackson a run for his money, and deeply longs to see India. I wish him well, and truly hope he makes it to India someday. Dorjee, you will remain in my memories for long.

The experience of the entire journey was one of its kinds, and I gained more than I can describe. The mountains come calling; always further than it looks, taller than it seems and harder than it feels. Like the mountaineer Sir Edmund Hilary said 'in such journeys, it's not the mountain we conquer, but ourselves'.

So I'd say keep close to Nature's heart, and once in a while, climb a mountain or spend a week in the woods. I'll end it with the words of Li Bhai, a legendary Chinese poet –

You ask me why I dwell in the green mountain; I smile and make no reply for my heart is free of care. As the peach-blossom flows downstream and is gone into the unknown, I have a world apart that is not among men'. Explore and Experience this amazing world!

Index

1. A life time journey!- Selva
2. Why celebrate? –Peri
3. Responses from the Readers
4. Ways to fly - Priyanka
5. Autistic child and altruistic parents(a real story) –Adinarayan Pingali
6. Children and Play- Ramadevi
7. ಕೆಲಸ ಕಲಿಸಿದ ಪಾಠ Work that taught lesson)- ಗೋಪಾಲಕೃಷ್ಣ ಐ Gopalakrishna
8. *'ಸಂಗಮ'* – ಹೊಸ ಉದ್ಯೋಗಿಗಳು ಸಂಸ್ಥೆಯೊಂದಿಗೆ ಬೆರೆಯುವ ಪ್ರಕ್ರಿಯೆ 'Sangama'- A process of new employees integrating with the organization – ಎಸ್ ವಿ ಮಂಜುನಾಥ್ S V Manjunath
9. ಗುಲಾಬಿ ಹುಡುಗಿ A rose girl– ಷಡಕ್ಷರಿ ತರಬೇನಹಳ್ಳಿ Shadakshari Tarabenahalli
10. ಹೀಗೊಂದು ಅನುಭವ An experience – ಆಶಾರಾಣಿ Asha Rani
11. Hope – Randeep Kaur
12. ನಂಬಿಕೆ ಎಂಬ ಫಲಿತ Hope a reflection– ಶೌರೀಶ್ ಕುದ್ಕುಳಿ Showrish Kudkuli
13. ಒಂದು ಬೆಕ್ಕಿನ ಆತ್ಮಕಥೆ An autobiography of a cat– ರಾಮಕೃಷ್ಣ ಭಟ್ Ramakrishna Bhat
14. ಶಾಲೆಯ ಮುಖ ಕಾಣದವರು One who have not seen the face of school – ಶ್ರೀಲತ್ ಕೆ ಎನ್ Shreelatha K N
15. ನಾನೊಂದು ಪ್ರಶ್ನೆ ಕೇಳಲೇ? ಕೃತಿ ವಿಮರ್ಶೆ Can I ask a question?- *Book review*– ಎಸ್ ವಿ ಮಂಜುನಾಥ್ S V Manjunath
16. What got you here won't get you there Book review – Praveen Kumar G
17. ಅಕ್ಷಯ ತೃತೀಯ ಮತ್ತು ಅವಳೊಂದಿಗೆ ಸಾಗಿ ಬಂದ ಹಾದಿಯ ಗುಂಟಾ Akshaya triteeya and my journey with her – ಷಡಕ್ಷರಿ ತರಬೇನಹಳ್ಳಿ Shadakshari Tarabenahalli
18. Cool Clicks

Responses from the Readers

In order to increase the quality of the magazine and create healthy interaction between the writers and the readers we have started a column for 'Response from the Readers'. Here, you can respond to single items or to the whole 'Bayalu' issue. You can also start a discussion or raise questions. You can ask responses for a particular thing that would have triggered some thoughts in you, please share that. It can also be a response or communication with the coordination team. It could be anything. Please respond and we carry your response.

Here are some of the responses from our readers…

ಷಡಕ್ಷರಿ ತರಬೇನಹಳ್ಳಿ

'ಬಯಲು ಹೆಜ್ಜೆ'…"ಬಯಲು" ಹಾದಿಯಲ್ಲಿ ಮೂಡಿದ ಮೊದಲ ಹೆಜ್ಜೆಯ ಗುರುತು ಹುಡುಕುತ್ತಾ

ನನ್ನ ಕುಟುಂಬದಿಂದ ದೂರವಾಗಿ ಬದುಕುವ ಯಾದಗಿರಿಯಲ್ಲಿ ನನ್ನ ಒಬ್ಬಂಟಿತನಕ್ಕೆ ಜೊತೆಯಾಗಿದ್ದು ಪುಸ್ತಕಗಳು ಮತ್ತು ಆಗಿನ್ನೂ ಯಾದಗಿರಿಯಲ್ಲಿ ಕಣ್ಣು ಬಿಟ್ಟಿದ್ದ ಪುಟಾಣಿ ಬಯಲು ಪತ್ರಿಕೆ. ನನ್ನ ಬಿಡುವಿನ ಸಮಯದಲ್ಲಿ ಈ ಬಯಲುವಿಗಾಗಿ ಬರೆಯಲು ಶುರುವಿಟ್ಟುಕೊಂಡೆ. ಬಯಲುವಿನಲ್ಲಿ ನನ್ನ ಲೇಖನ, ಕವನದಂಥದ್ದು ಪ್ರಕಟಗೊಂಡಾಗ ಮತ್ತೆ ಮತ್ತೆ ಓದಿ ಖುಷಿಪಡುತ್ತಿದ್ದೆ. ಆ ಖುಷಿಯ ಮಜಾ ಎಷ್ಟಿತ್ತೆಂದರೆ ನನಗೆ ಒಂದು ಕಾದಂಬರಿ, ಮತ್ತೊಂದು ಕವನ ಸಂಕಲನ ಮತ್ತು ನನ್ನ ಅಮ್ಮನ ಆತ್ಮಕಥೆ ಬರೆಯಲು ಸಾಕಾಗುವಷ್ಟು ಶಕ್ತಿ ಬಂದಷ್ಟು ಹುಮ್ಮಸ್ಸಿನಷ್ಟಿತ್ತು ಎಂದು ಹೇಳಿಕೊಳ್ಳಲು ನನಗೇ ಆಶ್ಚರ್ಯವಾಗುತ್ತದೆ.

ಬಯಲಲ್ಲಿ ನಾನು ನನ್ನ ಬಿಡುವಿನ ಸಮಯದಲ್ಲಿ ನನ್ನ ಕುಟುಂಬದ ಸದಸ್ಯರೊಂದಿಗೆ ಮತ್ತು ನನ್ನೊಳಗೇ ನಡೆಸಿಕೊಂಡಂತ ಆತ್ಮೀಯವಾದ ಸಂವಾದಗಳ ಲಹರಿಯಂತಿರುವ ಒಂದು ಸಾಹಿತ್ಯದ ಕಟ್ಟುವಿಕೆ ಈ "ಬಯಲ ಹೆಜ್ಜೆ". ಈ ಸಂಕಲನವು ನಾನು ನಿಮ್ಮೊಂದಿಗೆ ಇದ್ದ ಸಮಯ ಹೊರಬಂದಿದ್ದು ಎಂದು ಹೇಳಲು ನನಗೆ ಅಚ್ಚರಿಯಾಗುತ್ತದೆ. ಬಹುಷಃ ನಾನು ಈ ಓದುವ ಬರೆಯುವ ಹುಮ್ಮಸ್ಸನ್ನು ನೂರ್ಮಡಿಗೊಳಿಸುವ ಪೂರಕ ಪರಿಸರದಲ್ಲಿಲ್ಲದಿದ್ದರೆ ಈ ಪುಸ್ತಕ ಬರಲು ಸಾಧ್ಯವಾಗುತ್ತಿರಲಿಲ್ಲವೇನೋ.

ಇದೇ ಪೆಬ್ರವರಿ ತಿಂಗಳು 22 ರಂದು ನಾನು ಬರೆದ **"ಬಯಲು…. ಹೆಜ್ಜೆ…"** ಎಂಬ ಒಬ್ಬಂಟಿಯೊಬ್ಬನ ಲಹರಿಗಳ ಸಂಕಲನ ನಮ್ಮೂರಿನಲ್ಲಿ ನಡೆಯುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತು ಆಯೋಜಿಸಿರುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಓದುಗರಿಗೆ ಅರ್ಪಣೆಗೊಳ್ಳಲಿದೆ. ಈ ಸಮಾರಂಭಕ್ಕೆ ನಿಮಗೆಲ್ಲರಿಗೂ ನನ್ನ ಆತ್ಮೀಯ ಸ್ವಾಗತ.

ನನ್ನ ಈ ಪುಸ್ತಕದ ಬರವಣಿಗೆಯ ಪಯಣಯೊಂದಿಗೆ ನೀವೂ ನನ್ನ ಜೊತೆ ಇರುವುದನ್ನು ಹೇಳಲು ನನಗೆ ತುಂಬಾ ಖುಷಿಯೆನಿಸುತ್ತದೆ. ಹೇಗಂತೀರಾ, ಅದು ನಮ್ಮದೇ **"ಬಯಲು" ಪತ್ರಿಕೆಯ ಬಳಗ.** ಈ ಬಯಲು ಪತ್ರಿಕೆ ಹುಟ್ಟಿದ್ದು ನಾನು ಕೆಲಸ ಮಾಡುತ್ತಿರುವ ಯಾದಗಿರಿ ಜಿಲ್ಲಾ ಸಂಸ್ಥೆಯಲ್ಲಿ ಎಂದು ಹೇಳಿಕೊಳ್ಳಲು ಹೆಮ್ಮೆಯೆನಿಸುತ್ತದೆ. ಇದರ ಕನಸುಗಾರ ಉಮಾ ಶಂಕರ ಪೆರಿಯೋಡಿ. ಅವರ ಬಯಲ ಕನಸು ನನ್ನಲ್ಲಿ ಹುದುಗಿದ್ದ ಬರೆಯುವ ಬೀಜಗಳನ್ನು ನಾಟಿಮಾಡಲು ಸಮೃದ್ಧವಾದ ನೆಲವನ್ನು ಒದಗಿಸಿಕೊಟ್ಟಿತು

ರಾಮಕೃಷ್ಣ ಭಟ್

ಬಯಲು ಪ್ರಯತ್ನ ಅರ್ಥಪೂರ್ಣವಾದ್ದು

ಬಯಲು ಹಲವು ಬಗೆಯಲ್ಲಿ ವಿಶಿಷ್ಟವಾಗಿದೆ. ಅದರಲ್ಲಿ ನನಗೆ ಬಹಳ ಮುಖ್ಯವೆನಿಸುವ ಒಂದು ಕಾರಣವಿದೆ. ಏನೆಂದರೆ ನಮ್ಮ ಹಾಗೆ ಕೆಲಸ ಮಾಡುತ್ತಿರುವ ಹಲವರು ತಮ್ಮೆಲ್ಲ ಕೆಲಸಗಳ ಮಧ್ಯೆ ಅದರಲ್ಲಿ ಬರೆಯುತ್ತಾರೆ. ಅಂತವರನ್ನು ಕಂಡಾಗ ಸಿಕ್ಕದ್ದು, ಮಾತಾಡುವಾಗ ಸಿಕ್ಕದ್ದು, ಬರಹಗಳ ಮೂಲಕವೆ ಸಿಗುವುದಕ್ಕೆ

ಉಳಿಯುವುದು ಅಲ್ಲಿರುತ್ತದೆ. ನಮಗೆ ಗೊತ್ತಿರುವವರನ್ನು ಓದುವುದೆ ಒಂದು ಅನುಭವ. ಹಾಗಾಗಿ ಬಯಲು ಪ್ರಯತ್ನ ಅರ್ಥಪೂರ್ಣವಾದ್ದು. ಎಲ್ಲ ಕೆಲಸಗಳ ಮಧ್ಯೆ ಬರುವ ಸಂಚಿಕೆಯನ್ನು ಹಂಬಲಿಸಿ ಓದುವಂತಾದ್ದು.

ಹೋದ ಜನವರಿ ಸಂಚಿಕೆಯನ್ನು ನಾನು ತುಂಬ ಸಲ ಸ್ಕ್ರೋಲ್ ಮಾಡಿದೆ. ಅದರ ಅಂಚಿನ ತೋರಣ ಜೀವಂತವಿತ್ತು. It was a thing of beauty with the life of both the animate and the inanimate. ಪುನಃಪುನಃ ಹಂಬಲಿಸಿ ನೋಡುವಷ್ಟು ಚೆನ್ನಾಗಿತ್ತು.

Manjunath S V

Bayalu motivates each one of us to write in our own way

The open format gives a lot of freedom for members to share their articles/poems/ art work etc. Also, freedom to write in any language motivates each one of us to write. Not restricting to write only on education encourages people to contribute!

Each unit in Karnataka taking responsibility, without compromising on the quality and consistently releasing every issue of 'Bayalu' on time is good.

Specific themes for some months make people to think and write on specific issues. I wish this endeavor continues and most people use the space for contributing.

Why celebrate?

♥ **Peri**

Today is my birthday and I have come to Bantwal to celebrate my birthday with my mother. Not that I have celebrated all the 56 birthdays in my life. There are plenty of birthdays that I have missed. Some I have missed due to some other engagements and priorities. Some, when I rebelled against such rituals during my student days. Those 6-7 years were the days of the influence of the left movements on me; it was really bad and I was going through a tough time. That was the time when such rituals and celebrations appeared meaningless to me. Suddenly everything we were doing at home started looking superstitious and reactionary. I was fighting; fighting with my family, with the community and with myself. Through all these years, there is one person who has consistently celebrated my birthday, all these 56 birthdays, without a single lapse, and that is my mother. She is perhaps the only one who has celebrated 57 of my birthdays.

My question when I was a student was: why is she celebrating when I myself do not want it to be celebrated? How come these people cannot see the futility of these rituals? Inspired by those student struggles and movements, I tried convincing them in vain. In great dilemma, I finally made up my mind to confront my mother and stop this nonsense. I gathered all my arguments, and one evening, started the discussion with her. "Why do you celebrate? This has no meaning, it is senseless." I said everything that I knew. She listened to me and after some time she said, "If I do not celebrate this, what else do I have to celebrate?" I was speechless. I started thinking.

Those were very tough days. Amma had to do everything. Appa was in Bombay. Working in the field, rolling beedies, looking after the cattle and hens… she would do everything and in the midst of it all, she would celebrate my birthday. The celebration was very simple. A simple chicken curry, for which she would grow the chicken herself with a lot of care. There were days when she did not even have chicken and it would just be rice porridge with some jaggery smeared on it. But why do I call it a celebration? The celebration was in the way she prepared and distributed it. She would prepare it and then distribute it to all our neighbors saying, "It is my Uma's birthday!" After this I have never questioned this celebration. I think today, that it is these small celebrations which keep the majority of us going. With hope we celebrate, and the celebrations motivate us.

When I was in high school the beedi-rolling women started to unionize. Slowly, it picked up, and in South Canara, a huge movement was built and they were able to negotiate very successfully with the powerful owners and exploitative contractors. This resulted in increasing their payment

and an improvement of their working condition. More than anything, the exploitation of the women was curtailed. All our relatives and neighbours were completely involved in this movement.

All my relatives and the people of this area believe in spirits – the Bhootha – and they would have space for the deity in one corner of the hall; in one corner would be this Bhootha, and on the front wall would be hanging Shiva, Parvathi and Ganapathi. During the unionization, the left party – the CPI – was able to influence this strip of coastal Karnataka. After their success in the movement, Lenin became very famous and we saw Lenin getting a space along with Shiva, Parvathi and the Bhootha. And whenever there was some Pooja and celebration, along with the Bhootha and Shiva, they would perform the ritual to Lenin too! I could not tolerate this. I would always make fun of this situation, and very aggressively so at home when relatives would visit us. Once, when we had relatives at home who were active union members with the 'Lenin-God syndrome', I made a lot of fun trying to drive home this point and educate them. After the guests left, my mother said, "Do we not perform Pooja to all those things that give us food – our field, the plough the oxen… and celebrate when we have achieved something? Similarly they feel he is responsible for their success and has given them a decent life. What is the harm in celebrating their success and showing gratitude to him?" I was speechless.

Ways to Fly

Priyanka

You could flap your wings
Hard, Like a pigeon.

Or, Veer to the right
Then, left
Drop height
And up gain
Like the swallow

Go steady,
Like the ibis.

Or, run, gain speed
Take flight,
And run again
Like the rooster.

Fly in fleet, speaking tongues
Like the parakeets.

Or simply sail, like the gay white swan.

Autistic child and altruistic parents (a real story)

♥ **Adinarayan Pingali**

Autism, sometimes referred to as Autistic Spectrum Disorder (ASD), is known as a complex developmental disability. Experts believe that Autism presents itself during the first three years of a person's life. The condition is the result of a neurological disorder that has an effect on normal brain function, affecting development of the person's communication and social interaction skills. A person with ASD prefers to stick to a set of behaviors and will resist any major (and many minor) changes to daily activities.



Kishan (name changed) is an 8 years old child (with special needs – CWSN) who flies rather than walking on the floor. It means he walks on toes. He was born with low birth weight. Added to this, the boy experienced difficulties in speech, walking, vision, squint eye, hyper activity etc. during the process of development. He has one sister who is a normal girl.

He was subjected to various assessment tests like Development quotient (DQ), social maturity quotient, IQ, speech assessment, behaviour assessment etc. and was given treatment for improving in all the areas.

He was identified as autistic child at the age of three. When Psychiatrists, started explaining about Autism, parents / grand-parents were not able to accept the fact initially anticipating social problems. Slowly, it is the '*time*' that molded them to Kisnan's status slowly. Parents misunderstood autism to Mental Retardation. They were sure that their boy is a Special Child but, after 20 months only they understood what Autism really means and what they have to do for him. They were more worried about Kishan's future and the consequences that he may have to face in life.



They started a new journey with National Institute of Mental Health (NIMH), Hyderabad. The response was very good. But, this institute deals with treatment for mentally retarded people; they could not get the desired support. Whenever they visited the institute, they, (parents) got disturbed looking at the environment there filled with mentally retarded children and elders, who visit there. Later, they tried to visit other private institutes and then realized the importance of NIMH. Interaction with many parents of Autistic and mentally challenged children transformed their outlook and perspective towards this challenge.

The entire, family shifted to Hyderabad from native place for better care for Kishan. This has been a big challenge for the whole family. Leaving their native place as well as their own house, friends and relatives was not easy. Grand-parents felt that the problem would be solved in few days. But the interaction with other family members of Autistic children and other children with special needs made them realize the fact slowly. Father was transferred to other place for 3years, where he had to commute from Hyderabad every day. During this period Kishan's grand-parents have taken great care in his absence at home as well as moral support to mother in attending necessary therapies from time to time.

Kishan was admitted in a Play school as per Doctor's advice. That was a normal Play group school, having children aged between 3 years to 8 years. Children of Kishan's age (6yrs) were in Upper KG and 1st class, but, he was asked to sit with Play group children of 3 to 4 years age. After some months, the school management informed parents that they could not continue the boy for the reason that other children's parents started objecting. Later, they tried for about 20 schools for his admission. There was one school, which accepted him for about 1 year. Next year, he was admitted to a Special (Autism) School, which is now a great hub for him

Now after 4-5 years, the child has improved a lot and mother has taken a decision to become a resource person in the same field. For the last 5 years, his parents, grand-parents have been struggling to bring him to the main stream. Entire family has taken this as a challenge to assist Kishan to lead a normal life. During the process they have consulted doctors of different specialties, therapists, dieticians, rehabilitation centers etc.

In case of children with special needs, early identification and intervention, accepting the condition would be of great help for main streaming them or mitigate the loss, at least.

"The society has to be more open and matured in terms of understanding and supporting the challenged children and their families. We, as family members of Kishan, the Autistic child, felt this very strongly. Our neighbours in the residential complex, the fellow passengers during our journey,

the passersby at the shopping places thrown much stress upon us thru' their looks 'n comments. But, during the process of our journey, we found many good people also in the society, who gave us very good support morally and emotionally" says Kishan's father.

C H I L D R E N and P L A Y

Ramadevi

Play is child's work..Children by nature are playful..

When we ask any child as to what he/she has done today or what they want to do, the spontaneous answer is "I was playing or I will go to play". But we as adults misunderstand this and read it as waste of time and energy. We do not see how learning happens with play. Studies show play as an essential, integral and critical part for overall child's healthy development.

Play helps development by stimulating the brain through the formation of connections between nerve cells. This process helps with the development of fine and gross motor skills. Play also helps the child to develop language and socialization skills. Play allows children to learn to communicate emotions, to think, to mature, be creative, solve problems and most importantly, to have fun. Play connects children with their imagination, their environment, their parents, the family and the world around. Playing in children establishes and strengthens bonds that will last forever. Playtime provides opportunities for the child to confront and resolve individual differences, share values, address peer, family, school related concerns and issues.

Whoever is involved in a child's world of play may be the parents, caregivers, teachers, Anganwadi Workers, Anganwadi Helpers, the peer group is not only beneficial for the child but is extremely beneficial to all because play starts in the child's infancy and ideally,

continues throughout one's life. All of us enjoy playing in one form or the other. It allows all of us to view the world through the eyes of a child once again.

"Today I am a father and my work is breadwinning and caring"

"Today I am a mother and my work is caring and breadwinning"

"Today I am a teacher and my work is teaching"

"Today I am a child and my work is Play" Allow me to do my work, do not stop me.

ಕೆಲಸ ಕಲಿಸಿದ ಪಾಠ

♥ ಗೋಪಾಲಕೃಷ್ಣ .ಐ.

ಜೀವನಕ್ಕೆ ಓದು ಮುಖ್ಯ. ಅದಕ್ಕಾಗಿ ಏನೆಲ್ಲಾ ತಾಕಲಾಟಗಳನ್ನು ಅನುಭವಿಸಬೇಕಾಗುತ್ತದೆ. ಹಾಗಂತ ಸುಮ್ಮನೆ ಕುಳಿತುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಒಳಗಿನಿಂದ ಅದೆಂತಹದೋ ಒಂದು ರೀತಿಯ ಒತ್ತಡ ನನ್ನನ್ನ ಕಾರ್ಯನ್ಮೋಮುಖನನ್ನಾಗಿಸಿ ಬಿಡುತ್ತದೆ. ಅದನ್ನು ಸಾಧಿಸಲೇಬೇಕು ಎಂದಾಗ ಧುತ್ತನೆ ಎದುರಾಗುವ ಸಮಸ್ಯೆಗಳಿಗೆ ಒದಗುವ ಪರಿಹಾರವು ನನ್ನನ್ನ ಅತ್ಯಂತ ಹರ್ಷಿತರನ್ನಾಗಿಸಿ ನನ್ನ ಕಾರ್ಯಕ್ಕೆ ಮುಂದಿನ ಹೆಜ್ಜೆ ಇಡುವಂತೆ ಮಾಡುತ್ತದೆ. ಇದೇ ಹಾದಿಯಲ್ಲಿ ನನ್ನ ಜೀವನದ ಕೆಲ ಘಟನೆಗಳು ಇಲ್ಲಿದೆ. ಇವೆಲ್ಲಾ ಅನುಭವಗಳನ್ನು ಅಕ್ಷರ ರೂಪದಲ್ಲಿ ಬರೆಯತ್ತಿದ್ದೇನೆ. ಹೀಗೊಮ್ಮೆ ಓದಿಕೊಳ್ಳಿ.

ಆರ್ಯವೇದ ವೈದ್ಯರಾದ ನನ್ನ ತಂದೆ ಊರುಗಳ ಪರ್ಯಟನೆಯ ನಂತರ ನೆಲೆ ನಿಂತಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೊಲ್ನಾಡು ಗ್ರಾಮದ ಕುಡ್ತಮುಗೇರು ಎಂಬಲ್ಲಿ. ವಾಸ್ತವ್ಯಕ್ಕೆ ಅದೇ ಗ್ರಾಮದ ಪಡಾರಿನ ಹಿರಿಯರು ತಮ್ಮ ಜಮೀನಿನಲ್ಲಿ ಕಟ್ಟಿದ ಎರಡು ಸಣ್ಣ ರೂಮಗಳುಳ್ಳ ಮನೆಯನ್ನು ಉಚಿತವಾಗಿ ನೀಡಿದರು. ಹಾಗೆಯೇ ದಿನಾ ಸುಮಾರು 3 ಕಿ.ಮೀ ದೂರ ನಡೆದು, ಅಟೋ ರಿಕ್ಷಾದಲ್ಲಿ 8 ಕಿ.ಮಿ ಕ್ರಮಿಸಿ ವಿಟ್ಲದಲ್ಲಿ ಪಿಯುಸಿ ಪರೀಕ್ಷೆ ಬರೆದೆ. ನಂತರ



ಮುಂದೇನು? ಎಂಬ ಪ್ರಶ್ನೆ ಎದುರಾಯಿತು. ಪದವಿಯನ್ನು ಪಡೆಯಲೇಬೇಕೆಂದು ನಿರ್ಧರಿಸಿದೆ. ಆದರೆ ನಮ್ಮ ಹಣಕಾಸು ಸ್ಥಿತಿಯಲ್ಲಿ ಓದು ಮುಂದುವರಿಸುವುದು ಆಸಾಧ್ಯದ ಮಾತಾಗಿತ್ತು. ಆಗ ನನ್ನ ಸಹಾಯಕ್ಕೆ ಬಂದವರು ಸ್ನೇಹಿತರಾದ ಮುಕುಂದ ಮಾಸ್ಟರರ ಮಗ ಬಾಲಸುಬ್ರಹ್ಮಣ್ಯ. ಇವರು ಮಂಗಳೂರಿನಲ್ಲಿ ಕರ್ನಾಟಕ ಬ್ಯಾಂಕ್‌ನಲ್ಲಿ ಸಹಾಯಕರ ಹುದ್ದೆಯಲ್ಲಿದ್ದರು. ಅವರಲ್ಲಿ ಮಂಗಳೂರಿನಲ್ಲಿ ಏನಾದರೂ ಕೆಲಸ ಕೊಡಿಸಬಹುದೇ? ಎಂದು ಕೇಳಿದೆ. ಅಗ ಅವರು ನನ್ನನ್ನು ಮಂಗಳೂರಿಗೆ ಕರೆಯಿಸಿ ಪರಿಚಯಿಸಿದ್ದು ಬಿಪಿನ್ ಕುಮಾರ & ಕಂಪೆನಿಯ ಮುಖ್ಯಸ್ಥ ನಟವರಲಾಲ್‌ರನ್ನು. ಇವರು ಚಿನ್ನಾಭರಣ ತಯಾರಿಕಾ ಹಾಗೂ ಮಾರಾಟ ವ್ಯವಹಾರ ಸಂಸ್ಥೆ ನಡೆಸುತ್ತಿದ್ದರು. ಮಾತುಕತೆ ಮುಗಿದು ನನಗೆ ಕೆಲಸ ನೀಡುವುದು ಖಾತರಿಪಡಿಸಿದರು. ತಿಂಗಳಿಗೆ ಮಾಸಿಕ ಸಂಬಳ ರೂ.250ನ್ನು ನೀಡುತೇನೆ ಎಂದು ಭರವಸೆ ನೀಡಿದರು. ಇದರ ಜೊತೆಗೆ ನನಗೆ ಓದನ್ನು ಮುಂದುವರಿಸಬಹುದು ಬಯಕೆ ಪ್ರಾರಂಭವಾಯಿತು. ಇದಕ್ಕೆ ಪೂರಕವಾಗಿ ಮಂಗಳೂರಿನಲ್ಲಿ ಎರಡು ಸಂಜೆ ಕಾಲೇಜುಗಳಿದ್ದವು.

ಈ ಕೆಲಸ ಒಪ್ಪಿಕೊಳ್ಳಲು ಇನ್ನೊಂದು ಕಾರಣವಿತ್ತು. ನನ್ನ ಮನೆಯಿಂದ ಮಂಗಳೂರಿಗೆ ಸುಮಾರು 55 ಕಿ ಮಿ ದೂರ ಹಾಗೂ ಸೀಮಿತ ಖಾಸಗಿ ಬಸ್ ಸಂಚಾರವಿತ್ತು. ಆದ್ದರಿಂದ ದಿನಾ ಪ್ರಯಾಣ ಮಾಡಲು ಆಸಾಧ್ಯದ ಮಾತು. ಅಲ್ಲದೆ ಈ ಸ್ಥಿತಿಯಲ್ಲಿ ನನಗೆ ಕೊಠಡಿಯನ್ನು ಬಾಡಿಗೆ ಪಡೆದು ಜೀವನ ನಡೆಸುವುದು ದುಸ್ತರ. ಈ ಮಾಲಿಕರ ಮನೆ ಎರಡು ಮಹಡಿಯ ಕಟ್ಟಡ. ಮೇಲಿನ ಮಹಡಿಗಳು ಅವರ ವಾಸ್ತವ್ಯಕ್ಕೆ ಹಾಗೂ ನೆಲಮಹಡಿಯಲ್ಲಿ ಚಿನ್ನದ ಸರದ ತಯಾರಿಕಾ ಘಟಕ ಮತ್ತು ಅಂಗಡಿಗಳು.

ನೆಲಮಹಡಿ ಮೂಲೆಯಲ್ಲಿ ಕೆಲಸಗಾರರ ಕಾರ್ಯಗಾರ ಹಾಗೂ ಸಣ್ಣ ರೂಮ. ಆದರಲ್ಲಿ ರೂಮ ನೀಡಿ ವಾಸ್ತವ್ಯಕ್ಕೆ ಅನುಕೂಲ ಮಾಡಿದರು. ಬಹುಶ: ನಾನಿದ್ದ ಪರಿಸ್ಥಿತಿಯಲ್ಲಿ ನನಗೆ ಬೇರೆ ಯಾವುದೇ ದಾರಿ ಇರಲಿಲ್ಲ.

ಈ ಸಂದರ್ಭದಲ್ಲಿ ನನ್ನ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಯಿತು, ಉತೀರ್ಣನಾಗಿದ್ದೆ. ನನಗೂ ಓದು ಮುಂದುವರಿಸಬೇಕೆಂಬ ಹಂಬಲವಿತ್ತು. ಏನಾದರೂ ಆಗಲಿ ಎಂದು ಸೈಂಟ್ ಅಲೋಶಿಯಸ್ ಸಂಜೆ ಕಾಲೇಜಿಗೆ ಪದವಿ ಕಾಲೇಜಿನ ಪ್ರವೇಶಕ್ಕೆ ಅರ್ಜಿ ಸಲ್ಲಿಸಿದೆ. ತಂದೆಯೊಂದಿಗೆ ಮೌಖಿಕ ಸಂದರ್ಶನದಲ್ಲಿ ಪಾಲ್ಗೊಂಡೆ ಹಾಗೂ ದಾಖಲಾತಿಗೆ ಅನುಮತಿಯೂ ಸಿಕ್ಕಿತು. ಆಗಲೇ ಶುರುವಾಗಿದ್ದು ಧರ್ಮ ಸಂಕಟ.

ನಾನು ಕೆಲಸ ಮಾಡುತ್ತಿದ್ದ ಕಂಪೆನಿಯ ಮಾಲಕ ಸ್ವಲ್ಪ ಮುಂಗೋಪಿ. ಈತನ ಮನಸ್ಥಿತಿ ಅರಿತು ನನ್ನ ಸಂಜೆ ಕಾಲೇಜಿಗೆ ಹೋಗುವ ವಿಚಾರವನ್ನು ಪ್ರಸ್ತಾಪ ಮಾಡಬೇಕಿತ್ತು. ದಿನಗಳೂ ಕಳೆಯುತ್ತಾ ಹೋದವು. ಅವರೊಬ್ಬರೇ ಇರುವ ಅವಕಾಶಕ್ಕೆ ಕಾಯುತ್ತಾ ಇದ್ದೆ. ನನಗೆ ಅವಕಾಶ ನೀಡುತ್ತಾರೆ ಎಂಬ ನಂಬಿಕೆಯಿರಲಿಲ್ಲ. ಯಾಕೆಂದರೆ ಅಂಗಡಿಯ ವಹಿವಾಟು ಆಗುವುದೇ ಸಾಯಂಕಾಲ. ಏನಾದರೂ ಅಗಲಿ *'ವಚನೇ ಕಾ ದಾರಿದ್ರ್ಯತಾ?'* (ಮಾತಿನಲ್ಲಿ ಬಡತನವೇನು) ಎಂಬ ಸಂಸ್ಕೃತ ಉಕ್ತಿಯಂತೆ ಒಂದು ದಿನ ಧೈರ್ಯದಿಂದ ಕಾಲೇಜಿಗೆ ಹೋಗುವ ವಿಚಾರವನ್ನು ತಿಳಿಸಿ ಅನುಮತಿ ಕೋರಿದೆ. ಸ್ವಲ್ಪ ಹೊತ್ತು ಮೌನವಾಗಿ ಆಲೋಚಿಸುತ್ತಾ ನಿಂತು **"ಸರಿ ಹೋಗು"** ಎಂದರು. ನನ್ನ ಓದು ಮುಂದುವರಿಸಬೇಕೆಂಬ ಬಯಕೆಗೆ ನೀರೆರೆದು ಪ್ರೋತ್ಸಾಹಿಸಿದರು.

ನಾನು ಕೆಲಸಕ್ಕೆ ಸೇರಿದ ಕಂಪೆನಿಯ ಮಾಲಕರು ಜೈನ್ ಮಾರ್ವಾಡಿ ಕುಟುಂಬ ಸೇರಿದವರು. ನಟವರಲಾಲ್, ಆಶೋಕ್ ಕುಮಾರ್ ಮತ್ತು ಬಿಪಿನ್ ಕುಮಾರ ಎಂಬ ಮೂವರು ಸಹೋದರರು ಈ ವ್ಯವಹಾರವನ್ನು ನಡೆಸುತ್ತಿದ್ದರು ಹಾಗೂ ಇವರದು ತುಂಬು ಕುಟುಂಬ. ವ್ಯಾಪಾರ ವಹಿವಾಟನ್ನು ಮೂವರು ಹಂಚಿಕೊಂಡು ಕಾರ್ಯನಿರ್ವಹಿಸುತ್ತಿದ್ದರು. ಅದು ಹೇಗೆಂದರೆ ಚಿನ್ನ, ಹವಳ ಖರೀದಿಯನ್ನು ಒಬ್ಬರು ವಹಿಸಿಕೊಂಡರೆ, ಇನ್ನೊಬ್ಬರು ಚಿನ್ನಾಭರಣ ಅಂಗಡಿಯನ್ನು ನಿರ್ವಹಿಸುತ್ತಿದ್ದರೆ ಹಾಗೂ ಮತ್ತೊಬ್ಬರು ಹಣಕಾಸು ನಿರ್ವಹಣೆ ವಹಿಸಿಕೊಂಡಿದ್ದರು. ಮನೆಯ ಹೆಣ್ಣು ಮಕ್ಕಳು ಚಿನ್ನದ ಅಭರಣ ಅಂಗಡಿಯಲ್ಲಿ ವ್ಯಾಪಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹಿರಿಯ ಮಹಿಳೆಯರು ಗೃಹ ಕಾರ್ಯ ನಿರ್ವಹಿಸುತ್ತಿದ್ದರು. ಹಾಗೆಯೇ ಪ್ರತಿಯೊಬ್ಬರು ತಮ್ಮ ಕೆಲಸವನ್ನು ತಾವೇ ಪರಿಣಾಮಕಾರಿಯಾಗಿ ಮಾಡುತ್ತಿದ್ದರು. ಈ ಮನೆಯ ಸದಸ್ಯರ ನಡುವೆ ಇರುವ ಅನ್ಯೋನ್ಯತೆ ನನಗೆ ತುಂಬಾ ಹಿಡಿಸಿತು.

ಹಾಗೂ ಹೀಗೂ ನಾನು ಆ ಕಂಪೆನಿ ಹಾಗೂ ಮನೆಯ ಸದಸ್ಯನಾಗಿ ಪ್ರವೇಶ ಪಡೆದೆ ಹಾಗೂ ಕೆಲಸ ಮುಂದುವರಿಸಿದೆ. ಯಥಾಪ್ರಕಾರ ಸಂಜೆ ಕಾಲೇಜಿನಲ್ಲಿ ಮೊದಲನೇಯ ಪದವಿ ತರಗತಿಯ ಪಾಠ ಪ್ರವಚನದಲ್ಲಿ ತೊಡಗಿಸಿಕೊಂಡೆ. ಅದೊಂದು ಮುಂಜಾನೆ ಕಂಪೆನಿ ಮಾಲಕರು ಗ್ಯಾರೇಜ್‌ನ ಮೂಲೆಯಲ್ಲಿದ್ದ ಒಂದು ಹಳೆಯ ಸೈಕಲ್ ದುರಸ್ಥಿಮಾಡಿಸಲು ಹೇಳಿದರು. ಅದಕ್ಕಾಗಿ ರೂ.50ನ್ನು ನೀಡಿದರು. ಅವರು ಯಾಕೆ ಹೀಗೆ ಮಾಡಿದರು ಎಂದು ನನಗೆ ಅರ್ಥವಾಗಲಿಲ್ಲ. ನಾನು ಮನೆಯ ಪಕ್ಕದಲ್ಲೇ ಇದ್ದ ಸೈಕಲ್ ರಿಪೇರಿ ಮಾಡುವ "ನಾಯಕ್ಸ್ ಸೈಕಲ್"ನಲ್ಲಿ ದುರಸ್ಥಿಗೆ ನೀಡಿದೆ. ಒಂದು ವಾರದ ನಂತರ ಸೈಕಲ್ ದುರಸ್ಥಿಯಾಯಿತು ಹಾಗೂ ನಿನಗೆ ಕೆಲಸ ಕಾರ್ಯ ಮತ್ತು ಕಾಲೇಜಿಗೆ ಹೋಗಲು ಉಪಯೋಗಿಸಿಕೋ ಎಂದರು. ನಿರೀಕ್ಷೆಯೇ ಇಲ್ಲದಾಗ ಸಹಾಯಗಳು ಒದಗಿ ಬಂದಾಗ ಅಗುವ ಸಂತೋಷವನ್ನು ಅನುಭವಿಸಿಯೇ ತೀರಬೇಕು ಅಲ್ಲವೇ?.

'ಸಂಗಮ' – ಹೊಸ ಉದ್ಯೋಗಿಗಳು ಸಂಸ್ಥೆಯೊಂದಿಗೆ ಬೆರೆಯುವ ಪ್ರಕ್ರಿಯೆ

♥ ಎಸ್ ವಿ ಮಂಜುನಾಥ್



ಕಳೆದ ವರ್ಷದ ಅಕ್ಟೋಬರ್ ಮೊದಲ ವಾರದಲ್ಲಿ ಒಂದು ಅರ್ಥಪೂರ್ಣ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವ ಅವಕಾಶ ನನಗೊದಗಿಬಂತು. 25 ವರ್ಷಗಳ ಹಿಂದೆ ನಾನು ಅಭ್ಯಸಿಸಿದ ಬೆಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಸಮಾಜಕಾರ್ಯ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ಮೂರನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳು, ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ ತಮ್ಮ ಎರಡು ವರ್ಷದ ಕೋರ್ಸನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಹೊರನಡೆಯುತ್ತಿರುವ ಹಿರಿಯ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆಯನ್ನು, ಆಗಷ್ಟೇ ಪದವಿ ಮುಗಿಸಿ, ಸ್ನಾತಕೋತ್ತರ ವ್ಯಾಸಂಗ ಪಡೆಯುವ ಮೂಲಕ ಉಜ್ವಲ ಭವಿಷ್ಯ ರೂಪಿಸಿಕೊಳ್ಳುವ ಆಶಾಭಾವನೆಯಿಂದ ಮೊದಲನೇ ಸೆಮಿಸ್ಟರ್‌ಗೆ ಕಾಲಿರಿಸಿದ್ದ ಕಿರಿಯ ವಿದ್ಯಾರ್ಥಿ ಮಿತ್ರರಿಗೆ ಸ್ವಾಗತವನ್ನು ಕೋರಲು ಆಯೋಜಿಸಿದ್ದ ಭವ್ಯ ಸಂದರ್ಭವದು. ಸಾಮಾಜಿಕ ಅಭಿವೃದ್ಧಿ ಕ್ಷೇತ್ರದ ಪರಿವರ್ತನೆಯ ಹರಿಕಾರರಾಗಿಯೂ, ವೈದ್ಯಕೀಯ, ಮನೋವೈಜ್ಞಾನಿಕ ಕ್ಷೇತ್ರಗಳ ಆಪ್ತಸಮಾಲೋಚಕರು/ ಕಾರ್ಯಕರ್ತರಾಗಿಯೂ, ವಿವಿಧ ಸಂಸ್ಥೆಗಳ ಮಾನವ ಸಂಪನ್ಮೂಲ ವಿಭಾಗಗಳಲ್ಲಿ ದುಡಿಯುವ ಜನರ ಆಶೋತ್ತರಗಳಿಗೆ ದನಿಯಾಗಿಯೂ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಹೊರಟಿರುವ ಯುವಕ–ಯುವತಿಯರೊಂದಿಗೆ ಕೆಲಕಾಲ ಬೆರೆತು ಅವರೊಂದಿಗೆ ನನ್ನ ಅನುಭವ, ಸಲಹೆಗಳನ್ನು ಹಂಚಿಕೊಳ್ಳಲು ನಾನು ಉತ್ಸುಕನಾಗಿ ಭಾಗವಹಿಸಿದ್ದೆ. ನನ್ನೊಂದಿಗೆ, ನನಗೆ ಆಪ್ತರಾದ ಇನ್ನಿಬ್ಬರು ವೃತ್ತಿಪರ, ಸಾಮಾಜಿಕ ಬದ್ಧತೆಯುಳ್ಳ ಹಿರಿಯ ಮಿತ್ರರನ್ನು ಸಮಾರಂಭಕ್ಕೆ ಆಹ್ವಾನಿಸಲಾಗಿತ್ತು. ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕರು, ಇತರ ಸಿಬ್ಬಂದಿ ಸಹ ಉಪಸ್ಥಿತರಿದ್ದರು.

ಬಹುತೇಕ ಗ್ರಾಮೀಣ ಭಾಗದವರೇ ಆದ ಆ ವಿದ್ಯಾರ್ಥಿಗಳು ತಾವು ಬೆಳೆದ ಊರು, ತಾಲ್ಲೂಕುಗಳಲ್ಲೇ, ಅದರಲ್ಲೂ ಹೆಚ್ಚಾಗಿ ಕನ್ನಡ ಮಾಧ್ಯಮದಲ್ಲೇ ಇದುವರೆಗಿನ ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿರುವುದಲ್ಲದೇ ಶೇ.70ಕ್ಕಿಂತ ಮಿಗಿಲಾಗಿ ತಮ್ಮ ಕುಟುಂಬದಲ್ಲಿ ಈ ಮಟ್ಟದ ಶಿಕ್ಷಣ ಪಡೆದ ಮೊದಲನೇ ತಲೆಮಾರಿನವರಾಗಿದ್ದಾರೆ. ಇಂಥ ಸಂಕೀರ್ಣ ಸಾಮಾಜಿಕ, ಶೈಕ್ಷಣಿಕ ಸವಾಲುಗಳನ್ನು ತಮ್ಮ ಬಾಲ್ಯದಲ್ಲಿ ಎದುರಿಸಿಯೂ 'ಸಮಾಜ ಕಾರ್ಯ'ವನ್ನು ಉನ್ನತ ವ್ಯಾಸಂಗಕ್ಕಾಗಿ, ಹಾಗೂ ತಮ್ಮ ಭವಿಷ್ಯತ್ತಿನ ಕಾರ್ಯಕ್ಷೇತ್ರವನ್ನು ರೂಪಿಸಿಕೊಳ್ಳುವುದಕ್ಕಾಗಿ ಆಯ್ಕೆ ಮಾಡಿಕೊಂಡ ಯುವ ವಿದ್ಯಾರ್ಥಿಗಳನ್ನು ಅಭಿನಂದಸಿ ಅವರನ್ನು ಕುರಿತು ಕೆಲವು ಹಿತನುಡಿಗಳನ್ನಾಡಿದೆ. ನನ್ನ ಅಭಿಮತವೂ ವೇದಿಕೆಯ ಮೇಲಿದ್ದ ಇನ್ನಿಬ್ಬರು ಅತಿಥಿ ಮಿತ್ರರ ಸಂದೇಶಗಳೂ ಸುಮಧುರ ಸಂಗೀತದಲ್ಲಿ ಸ್ವರ–ರಾಗ–ತಾಳಗಳು ಸಮ್ಮಿಳಿತಗೊಳ್ಳುವಂತೆ ಒಂದಕ್ಕೊಂದು ಪುಷ್ಟೀಕರಿಸುವಂತಿತ್ತು. ನಾವುಗಳಾಡಿದ ಮಾತುಗಳ ಸಾರಾಂಶವಿಷ್ಟೇ :–

- ಎಂ.ಎಸ್.ಡಬ್ಲ್ಯು.ದಲ್ಲಿ ತೇರ್ಗಡೆ ಹೊಂದುವುದು ಆರಂಭಿಕ ಹೆಜ್ಜೆಯಿಟ್ಟಂತೆ. ಮುಂದೆ ಕೆಲಸ ಮಾಡಬೇಕೆಂದಿರುವ ಅಭಿವೃದ್ಧಿ/ಸೇವಾ ಕ್ಷೇತ್ರಗಳು ಅಥವಾ ಕೈಗಾರಿಕಾ ಸಂಸ್ಥೆಗಳಲ್ಲಿ ಯಶಸ್ವಿಯಾಗಲು ಬೇಕಾದ ಅಗತ್ಯ ಜ್ಞಾನ, ಮನೋಭಾವ, ಪರಿಣಿತಿಯನ್ನು ಅವರಿನ್ನೂ ಮೈಗೂಡಿಸಿಕೊಳ್ಳಬೇಕಿದೆ.
- ಕೆಲಸಕ್ಕೆ ಸೇರಿದ ಮೊದಲ ನಾಲ್ಕೈದು ವರ್ಷಗಳು ಅವರ ಭವಿಷ್ಯವನ್ನು ರೂಪಿಸಿಕೊಳ್ಳಲು ಅತ್ಯಂತ ಪ್ರಮುಖ ಘಟ್ಟವಾಗಿದ್ದು, ಸಮರ್ಥ, ಅನುಭವಿ, ವೃತ್ತಿಪರ ಮೇಲಾಧಿಕಾರಿಗಳ ಬಳಿ ಕಲಿಕಾರ್ಥಿಗಳಾಗಿ ಮುಕ್ತ ಮನಸ್ಸಿನಿಂದ ತಲ್ಲೀನರಾಗಿ ತೊಡಗಿಸಿಕೊಳ್ಳಬೇಕಿದೆ. ಹೊಸದನ್ನು ಕಲಿಯಬೇಕೆಂಬ ಕುತೂಹಲ, ಯಾವ ಕೆಲಸ ತಮ್ಮ ಪಾಲಿಗೆ ಬಂದರೂ ಅದರಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡು ಅದಕ್ಕೆ ತಕ್ಕ ನ್ಯಾಯ ಒದಗಿಸುವುದು.
- ಆರಾಮವಾದ, ಸುಲಭದ ಹಾದಿಯನ್ನು ಬದಿಗೊತ್ತಿ, ಅಗತ್ಯವಿದ್ದಲ್ಲಿ ನಿಗದಿತ ಅವಧಿಗಿಂತ ಹೆಚ್ಚು ಸಮಯ ದುಡಿಯಲು ಹಿಂದೇಟು ಹಾಕದೆ ಕಷ್ಟಪಟ್ಟು ದುಡಿಯುವುದು; ಕಲಿಕೆಗೆ ಪೂರಕವಾದ ಎಲ್ಲ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳುವುದು. ಕೆಲಸದ ನಿಮಿತ್ತ ಬೇರೆ ಊರುಗಳಿಗೆ ಪ್ರಯಾಣಿಸಲು ಸಿದ್ಧರಿರುವುದು.

- ಭಾಷಾ ಕೌಶಲ್ಯವನ್ನು– ಇಂಗ್ಲೀಷ್ ಮತ್ತು ಕನ್ನಡ ಎರಡರಲ್ಲೂ– ವೃದ್ಧಿಸಿಕೊಳ್ಳುವುದು. ಓದುವ, ಬರೆಯುವ, ಅಭಿವ್ಯಕ್ತಿಗೊಳಿಸುವ ಕಲೆಯನ್ನು ಸಿದ್ಧಿಸಿಕೊಳ್ಳುವುದು. ಕಲಿತದ್ದನ್ನು ಟಿಪ್ಪಣಿ ಮಾಡಿಕೊಳ್ಳುವುದು.
- ಆರಂಭಿಕ ವರ್ಷಗಳಲ್ಲಿ ವೃತ್ತಿಪರ ಸಾಮರ್ಥ್ಯ ವೃದ್ಧಿಯನ್ನೇ ತಮ್ಮ ಪ್ರಮುಖ ಗುರಿಯನ್ನಾಗಿಸಿಕೊಳ್ಳಬೇಕಾದುದರಿಂದ ಆಕರ್ಷಕ ಸಂಬಳ, ಸವಲತ್ತು, ಪದವಿ ಇವುಗಳಿಂದ ವಿಮುಖವಾಗಿರುವುದು (ಇದರರ್ಥ ಇವುಗಳಾವೂವೂ ಅಗತ್ಯವಲ್ಲವೆಂದಲ್ಲ).
- ತಮ್ಮ ವ್ಯಕ್ತಿತ್ವ ವಿಕಸನದತ್ತ ಗಮನಹರಿಸಿ, ಸ್ವಂತ ಆಲೋಚನೆ, ಸಮಾಜದ ವಿದ್ಯಮಾನಗಳ ಬಗ್ಗೆ ಮನನ ಹಾಗೂ ತಮ್ಮದೇ ಆದ ಸ್ವತಂತ್ರ ನಿಲುವನ್ನು ಸಾಧಿಸುವುದು; ಇದರ ಜೊತೆಗೇ ಯಾವ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಾರೋ ಅಲ್ಲಿನ ಸಹೋದ್ಯೋಗಿಗಳೊಂದಿಗೆ ಸಾಮರಸ್ಯದಿಂದ ಬೆರೆತು ಆ ಸಂಸ್ಥೆಯ ಗುರಿ, ಪ್ರಕ್ರಿಯೆಗಳಿಗೆ ಒಗ್ಗಿಕೊಳ್ಳುವ ನಿಟ್ಟಿನಲ್ಲಿ ಪೂರಕವಾಗಿ ತಮ್ಮ ವೈಯಕ್ತಿಕ ಬದ್ಧತೆಯನ್ನು ನೆಲೆಗೊಳಿಸುವುದು.



- ಎಲ್ಲಕ್ಕಿಂತ ಮಿಗಿಲಾಗಿ, ತಾವು ಹೊಸದಾಗಿ ಸೇರುವ ಸಂಸ್ಥೆಯಲ್ಲಿ ಅನೇಕ ಮೇಲಧಿಕಾರಿಗಳು, ಸಹೋದ್ಯೋಗಿಗಳಿದ್ದರೂ ಕೆಲವೊಮ್ಮೆ ಕೆಲಸದ ಒತ್ತಡದಿಂದಾಗಿ ಅವರಾರೂ ಈ ಹೊಸ ಉದ್ಯೋಗಿಗಳಿಗೆ ಹೆಚ್ಚು ಸಮಯ ವಿನಿಯೋಗಿಸಲಾರರು. ಇದರಿಂದ ಸಂಸ್ಥೆಯ ಉದ್ದೇಶ, ಸಾಂಸ್ಕೃತಿಕ ಹಿನ್ನಲೆ, ಅಲ್ಲಿ ಪಾಲಿಸಲಾಗುವ ನಿಯಮಗಳು ನೆಲೆಗೊಂಡಿರುವ ಪ್ರಕ್ರಿಯೆಗಳು, ಸಹೋದ್ಯೋಗಿ/ಮೇಲಧಿಕಾರಿಗಳ ಬಗೆಗಿನ ಸೂಕ್ಷ್ಮ ಒಳನೋಟಗಳು, ತಮ್ಮ ಪಾತ್ರದ ಬಗೆಗಿನ ನಿರ್ದಿಷ್ಟ ಕಲ್ಪನೆ, ಇವುಗಳು ಹೊಸ ಉದ್ಯೋಗಿಗಳಿಗೆ ದೊರೆಯದೆ, ಅವರ ಸ್ಥಿತಿ, **“------**ಪಳಗಿದ್ದ ಮನೆ, ಬಿದ್ದ ಕುಂಟ ಕುರುಡನ ತೆರದಿ**----“** (ಅಭ್ಯಾಸ ಬಲದಿಂದ ಕುರುಡನೊಬ್ಬ ವಾಸಿಸುತ್ತಿದ್ದ ಮನೆ ಬಿದ್ದು ಹೋಗಿ ಅವನು ಪಡುವ ಪಾಡು, ತಳಮಳದ ಸ್ಥಿತಿಯಂತೆ) ಆಗುತ್ತದೆ. ಈ ರೀತಿಯ ಅನಿಶ್ಚಿತತೆ, ಸಂಕೀರ್ಣ ಹುಡುಕಾಟದ ಗೊಂದಲವನ್ನೆದುರಿಸಲು ಅತ್ಯಂತ ತಾಳ್ಮೆಯಿಂದ ವ್ಯವಹರಿಸಬೇಕಾಗುತ್ತದಲ್ಲದೆ, ಈ ಸನ್ನಿವೇಶವನ್ನು ನಿಶ್ಚಿತತೆ, ಸ್ಪಷ್ಟತೆಯೆಡೆಗೆ ಕೊಂಡೊಯ್ಯಬೇಕಾದರೆ ಶೇ.80ರಷ್ಟು ಜವಾಬ್ದಾರಿ ಹೊಸ ಉದ್ಯೋಗಿಗಳದ್ದೇ ಆಗಿರುತ್ತದೆ. ಉದಾಹರಣೆಗೆ ತಮಗೆ ಬೇಕಾದ ಜ್ಞಾನ, ಮಾಹಿತಿ ಪಡೆಯಬೇಕಿದ್ದಲ್ಲಿ ಯಾವ ಮೂಲದಿಂದ, ಯಾವ ವ್ಯಕ್ತಿಯಿಂದ ಸಿಗುತ್ತದೆ. ಅದನ್ನು ಪಡೆಯುವ ಬಗೆ ಹೇಗೆ, ಆ ವಿಷಯವನ್ನು ಪಡೆದಾಗ ಅದನ್ನು ಯಾವ ರೀತಿ ತಮ್ಮ ಕಲಿಕೆಗೆ/ ಕೆಲಸಕ್ಕೆ ಅನ್ವಯಿಸಿಕೊಳ್ಳಬೇಕೆಂಬುದನ್ನು ಸಂಪರ್ಕಿಸಬೇಕೆಂದಿರುವ ವ್ಯಕ್ತಿಗೆ ಮನದಟ್ಟು ಮಾಡಿಕೊಡುವ ಅಗತ್ಯತೆ ಮತ್ತು ಅವರನ್ನು ಯಾವ ಸಂದರ್ಭದಲ್ಲಿ ಭೇಟಿಯಾದರೆ ಸೂಕ್ತ? (ಕಛೇರಿಯ ಅವಧಿಯನ್ನು ಮೀರಿದ್ದರೂ ಸಹ), ಇವುಗಳ ಬಗ್ಗೆ ಇತರ ಸಹೋದ್ಯೋಗಿಗಳಿಂದ, ಹಿರಿಯರಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಮುಖ್ಯವಾಹಿನಿಗೆ ಆದಷ್ಟು ಬೇಗ ಸೇರಲೆಂದು ಆಯ್ದ ಹಿರಿಯ ಉದ್ಯೋಗಿಗಳನ್ನು ಮಾರ್ಗದರ್ಶಕರಾಗಿ ನೇಮಿಸಿದ್ದರೂ, ಅವರು ಸಹ ಹಲವಾರು ಕೆಲಸಗಳ ಭಾರದಿಂದ ಹೊಸಬರಿಗೆ ಅಗತ್ಯ ಸಮಯ ನೀಡಲಾಗದಂಥ ಸ್ಥಿತಿಯಲ್ಲಿರುತ್ತಾರೆ. ಇಂಥ ಸಂದರ್ಭಗಳಲ್ಲಿಯೇ ಹೊಸ ಉದ್ಯೋಗಿಗಳ ವ್ಯಕ್ತಿತ್ವ ಒರೆಗೆ ಹಚ್ಚಲ್ಪಡುವುದು. ತಮ್ಮ ಉದ್ದೇಶ ಪ್ರಾಮಾಣಿಕವಾಗಿದ್ದು, ಗುರಿ ಸಾಧಿಸುವ ನಿಟ್ಟಿನಲ್ಲಿ ಬದ್ಧರಾಗಿರುವ ಬಗ್ಗೆ ಸಂಸ್ಥೆಯ ಎಲ್ಲ ಅರ್ಥಪೂರ್ಣ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಕಲಿಕೆಗೆ, ಸಾಧನೆಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಬಗ್ಗೆ ತಮ್ಮ ಆಲೋಚನೆ, ನುಡಿ ಮತ್ತು ಕ್ರಿಯೆಯಲ್ಲಿ ಸ್ಪಷ್ಟ, ನಿರಂತರ ನಿದರ್ಶನಗಳನ್ನೊದಗಿಸಬೇಕಾದ ಜವಾಬ್ದಾರಿ ಹೊಸ ಉದ್ಯೋಗಿಗಳ ಮೇಲೆಯೇ ಹೆಚ್ಚಾಗಿರುತ್ತದೆ.

- ಮೇಲೆ ಪ್ರಸ್ತಾಪಿಸಿರುವ 'ಅನಿಶ್ಚಿತ ಸ್ಥಿತಿ' ಬೇರೆ ಬೇರೆ ಸಂಸ್ಥೆಗಳಲ್ಲಿ ಕೆಲಸಕ್ಕೆ ಸೇರುವ ಹೊಸಬರಿಗೆ ಎದುರಾಗಬಹುದಾಗಿದ್ದು, ಫೌಂಡೇಶನ್‌ನ ಹೊಸ ಉದ್ಯೋಗಿಗಳಿಗೂ ಅನ್ವಯಿಸುತ್ತದೆ. ನಮ್ಮ ಸಂಸ್ಥೆಗೆ ಸೇರುವ ಹೊಸ ಉದ್ಯೋಗಿಗಳು ಶಿಕ್ಷಣ,



ಅಭಿವೃದ್ಧಿ, ಕಾರ್ಪೋರೇಟ್ ಮೂಲಗಳಿಂದ ಬರುತ್ತಿದ್ದು ವಿಭಿನ್ನ ಹಿನ್ನಲೆ, ವಿವಿಧ ಸ್ತರದ ಅನುಭವಗಳು ಮತ್ತು ಮನೋಧರ್ಮಗಳನ್ನು ಹೊತ್ತು ತರುತ್ತಾರೆ. ಫೌಂಡೇಶನ್‌ನ ಮೂಲ ಉದ್ದೇಶ, ಕಾಣ್ಕೆ, ಸಾಮಾಜಿಕ ಬದ್ಧತೆಗಳನ್ನು ಒಪ್ಪಿಕೊಂಡು ಬಂದಿದ್ದರೂ, ಮೊದಲ ಆರೇಳು ತಿಂಗಳುಗಳ ಕಾಲ ಸಂಸ್ಥೆಯ ಕೆಲಸ–ಕಾರ್ಯಗಳು, ಆಂತರಿಕ ಪ್ರಕ್ರಿಯೆಗಳು, ತಾವು ನಿರ್ವಹಿಸುವ ಪಾತ್ರದ ನಿರ್ದಿಷ್ಟ ಸ್ವರೂಪ, ಇತರ ಸದಸ್ಯರ ಪರಿಚಯ ಮತ್ತು ಕಾರ್ಯವೈಖರಿ, ಮೇಲಾಗಿ ತಮ್ಮ ಸ್ವಂತ ನೆಲೆಯನ್ನು ಕಂಡುಕೊಳ್ಳಲಿಕ್ಕಾಗಿಯೇ ಹೆಚ್ಚಾಗಿ ವಿನಿಯೋಗವಾಗುತ್ತದೆ. ನಿಯತವಾಗಿ ಸೇರುವ ಖಾಯಂ ಸದಸ್ಯರ ಜೊತೆಗೆ ಕಾಲೇಜು ವಿಶ್ವವಿದ್ಯಾನಿಲಯಗಳಿಂದ ಹೊಸದಾಗಿ ತೇರ್ಗಡೆ ಹೊಂದಿದ 'ಕ್ಯಾಂಪಸ್ ಅಸೋಸಿಯೇಟ್ಸ್', ಫೌಂಡೇಶನ್‌ನ ಕೆಲಸ ಕಾರ್ಯಗಳಲ್ಲಿ ನೇರವಾಗಿ ತೊಡಗಿಸಿಕೊಳ್ಳುವ ಮೂಲಕ ತಮ್ಮ ಪ್ರಸ್ತುತ ಅನುಭವ ಕ್ಷೇತ್ರದಿಂದ ಎರಡು ವರ್ಷಗಳ ಕಾಲ ಬಿಡುವು ಹೊಂದಿ, ಮುಂದಿನ ವೃತ್ತಿ ಬದುಕಿಗೆ ಹೊಸ ಆಯಾಮವನ್ನು ಕಂಡುಕೊಳ್ಳಲು, ಶಿಕ್ಷಣ ಕ್ಷೇತ್ರವನ್ನು ಕೂಲಂಕುಷವಾಗಿ ಅರಿತುಕೊಂಡು, ಈ ಕ್ಷೇತ್ರದಲ್ಲೇ ತಮ್ಮ ಮುಂದಿನ ವೃತ್ತಿಬದುಕನ್ನು ರೂಪಿಸಿಕೊಳ್ಳಬಹುದೇ ಎಂಬ ಜಿಜ್ಞಾಸೆಗೆ ತಮ್ಮನ್ನು ಒಡ್ಡಿಕೊಂಡು ನಮ್ಮೊಂದಿಗಿರುವ 'ಫೆಲೋಸ್'– ಇವರೂ ಸಹ ಈ ಹೊಸಬರ ಪಟ್ಟಿಗೆ ಸೇರುತ್ತಾರೆ.

ಈ ಎಲ್ಲ ನವ ಸಹೋದ್ಯೋಗಿ ಮಿತ್ರರಿಗೆ ಸ್ಪಷ್ಟವಾದ ಚಿತ್ರಣವನ್ನು ನೀಡಿ, ತಂಡದ ಅವಿಭಾಜ್ಯ ಅಂಗವಾಗಿ ಅವರು ಗುರುತಿಸಿಕೊಂಡು ವೃತ್ತಿ ಬದುಕಿನಲ್ಲಿ ಬೆಳೆಯಲು ಪೂರಕವಾದ ವಾತಾವರಣವನ್ನು ನಿರ್ಮಿಸಿ, ಅವರೊಂದಿಗೆ ಆದಷ್ಟು ಹೆಚ್ಚು ಗುಣಾತ್ಮಕ ಸಮಯವನ್ನು ಕೊಟ್ಟು, ಅವರ ಎಲ್ಲ ಸಂದೇಹ, ಪ್ರಶ್ನೆಗಳಿಗೆ ಅವರೇ ಪರಿಹಾರ ಕಂಡುಕೊಳ್ಳುವಲ್ಲಿ ವಿವಿಧ ಘಟಕ, ತಂಡಗಳ ನಾಯಕರು ಮತ್ತು ಹಿರಿಯ ಸದಸ್ಯರು ಮಹತ್ತರ ಪಾತ್ರವನ್ನು ನಿರ್ವಹಿಸಬೇಕಿದೆ. ಆದಾಗ್ಯೂ ಸಂಪೂರ್ಣ ದಾರಿ, ಸ್ಪಷ್ಟ ಬೆಳಕು ಈ ನಿಟ್ಟಿನಲ್ಲಿ ಯಾವ ಹೊಸಬರಿಗೂ ದೊರೆಯುವುದು ದುರ್ಲಭ.

ಡಿ.ವಿ.ಜಿ ಕಗ್ಗದಲ್ಲಿ ಮಾರ್ಮಿಕವಾಗಿ ಹೇಳಿರುವಂತೆ,

ಅರೆಗಣ್ಣು ನಮದೆಂದು ಕೊರಕೊರಗಿ ಫಲವೇನು?
ಅರೆಬೆಳಕು ಧರೆಯೊಳೆಂದೊರಲಿ ಸುಖವೇನು?
ಇರುವ ಕಣ್ಣಿರುವ ಬೆಳಕಿನೊಳಾದನಿತ ನೋಡಿ
ಪರಿಕಿಸಿದೊಡದು ಲಾಭ–ಮಂಕುತಿಮ್ಮ

ಇಂಗ್ಲೀಷ್ ಭಾವಾರ್ಥ:

O! Mankutimma, what is the use of lamenting that our eyes are not capable of seeing the complete truth?
What is the use of bemoaning that light in this world is not sufficient?
It is best if we try to see whatever is visible in whatever light is available.

ಹೊಸ ಸಹೋದ್ಯೋಗಿಗಳಿಗೆ ಎಷ್ಟು ಸ್ಪಷ್ಟತೆಯಿದೆಯೋ, ಎಷ್ಟು ಬೆಳಕಿದೆಯೋ, ಅಷ್ಟರಿಂದಲೇ ತಮ್ಮ ಯಥಾರ್ಥವನ್ನು, ಗುರಿಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡುವುದು ಸೂಕ್ತ. ಇದು ಫೌಂಡೇಶನ್‌ನ ಮತ್ತು ಹೊಸ ಉದ್ಯೋಗಿಗಳ ಪರಸ್ಪರ ಉದ್ದೇಶ ಸಾಧನೆಯ ಮೊದಲ ಹೆಜ್ಜೆಯಾಗುತ್ತದೆ. ಆಗಲೇ ಮುಂದಿನ ವರ್ಷಗಳಲ್ಲಿ ಇನ್ನೂ ಅಧಿಕ ಸಂಖ್ಯೆಯಲ್ಲಿ ಹೊಸ ಉದ್ಯೋಗಿಗಳು ಸಂಸ್ಥೆಗೆ ಸೇರ್ಪಡೆಯಾಗಿ ಅವರು ಇಲ್ಲಿನ ಗುರಿ, ಸಂಸ್ಕೃತಿ, ಪದ್ಧತಿಗಳಿಗೆ ಒಗ್ಗಿಕೊಂಡು, ತಮ್ಮ ಹೊಸ ಆಲೋಚನೆಗಳು, ಅನುಭವಗಳನ್ನು ಮೇಳೈಸಿ, ಹೆಚ್ಚು ಸಂಖ್ಯಾಬಲವುಳ್ಳ, ಸ್ವಯಂಪ್ರೇರಿತ, ಸಮರ್ಥ, ಶಕ್ತಿಯುತ ಕಾರ್ಯಪಡೆಯಾಗಿ ಹೊರಹೊಮ್ಮಿ, ರಾಷ್ಟ್ರೀಯ ಗುರಿಯಾದ ಶಿಕ್ಷಣದ ಸಾರ್ವತ್ರೀಕರಣದಂಥ ಮಹತ್ತರ ಆಶಯವನ್ನು ಸಾಕಾರಗೊಳಿಸುವತ್ತ ಇನ್ನೂ ಪರಿಣಾಮಕಾರಿಯಾಗಿ ಮುನ್ನಡೆಯಲು ಸಾಧ್ಯವಾಗುತ್ತದೆ.

ಗುಲಾಬಿ ಹುಡುಗಿ

♥ ಷಡಕ್ಷರಿ.ತರಬೇನಹಳ್ಳಿ

ಹೇ ಪುಟ್ಟೀ....
ಈ ಗುಲಾಬಿ ತುತ್ತಿನ ಚೀಲ ನಿನಗೆ
ನೆನಪುಗಳ ಬುತ್ತಿಯ ಚೀಲ ನನಗೆ
ನಮ್ಮಿಬ್ಬರ ನಡುವಿನ ವ್ಯತ್ಯಾಸ
ಈ ಜಗದ ವ್ಯಾಪಾರ.

ಕೇಳು ಪುಟ್ಟಮ್ಮ...
ನಿನ್ನ ಹಡೆದವ್ವನಿಗೆ,
ಅವಳ ಇದೇ ಹೂ ಹಾದೀಲಿ ನಡೆಸುವೆ
ಎಂದಿದ್ದನಾ ? ನಿಮ್ಮಪ್ಪ ಮದುವೆಗೆ ಮುನ್ನ.
ನಿಮ್ಮವ್ವ ವಚನವಿತ್ತಿದ್ದಳಾ!
ಹೂವಿನಂಥಾ ಒಲವಿನ ಉಡುಗೊರೆ
ನಿನ್ನ ಹೆರುವೆನೆಂದು.

ನೀನು ಬೀದಿ ಬದಿಯ ವ್ಯಾಪಾರಕ್ಕೆ
ನಿಲ್ಲುವಲ್ಲಿ,ದಾರಿ ತಪ್ಪಿದ್ದೆಲ್ಲಿ?
ಅವರೀರ್ವರ ಬದುಕಿನ ಬಂಡಿ,
ಚಲಿಸದೆ ನಿಡುಸುಯ್ಯುತ್ತಾ,
ಕೆಂಪು ದೀಪವಿಲ್ಲದೇ ನಿಂತಿದ್ದೆಲ್ಲಿ?

ಮದುವೆ,ಮಧುಚಂದ್ರ, ಚುಕ್ಕಿ,ಚಂದ್ರಮರ,
ನಿಮಿರುವ ರೋಮ,ಬಿಸಿ ಉಸಿರುಕ್ಕಿ,
ಸುರಿದ ಬೆವರುಗಳ ಲೆಖ್ಖಕ್ಕೆ, ಒಡಲಾಳದಲ್ಲುಕ್ಕಿದ
ಹಸೀ ಹಸೀ ಕವನಗಳು ಮಾತುಕಥೆಗಳು,
ಬರೀ ಒಣಗಿದ ಅಕ್ಷರಗಳಾಗಿದ್ದೆಲ್ಲಿ?

ಕಾಡು ಮೇಡುಗಳಲೆದಾಟದ,
ನದೀತೀರದ ನಡಿಗೆಗಳ, ಜಾಡು ಮರೆತು
ಹೊಟ್ಟೆಪಾಡಿಗೆ ಸುಡುವ ಬಿಸಿಲಲಿ
ಈ ಹೂವಿನ ಜೋಡಿಯ ಮಾರುವತ್ತ,
ಜಾರಿದ್ದೆಲ್ಲಿ?

ಅವರ ಪ್ರೇಮದ ಗುಟ್ಟಾದ
ನಿನ್ನ ಒಂಬತ್ತು ತಿಂಗಳು ಹೊಟ್ಟೆಯಲೊತ್ತು,
ಗಂಡೋ ಹೆಣ್ಣೋ ಹೆಣೆದ ಕನಸುಗಳ
ತಿಪ್ಪೆಗೆ ಸುರಿದು, ಸುರಿವ ಸಿಂಬಳದ



ನಿನ್ನನ್ನಿಲ್ಲಿಗೆ ತಂದು ಬಿಟ್ಟ,
ಹಳಿವ ವಿಧಿಯಾದದ್ದೆಲ್ಲಿ?

ಕೇಳು ಕಂದಾ....
ನಿನಗೂ ಹೇಳಬೇಕೆನಿಸಿದೆ,

ನನಗೂ ಪಕಳೆಬಿರಿದು
ಸುರಿದಿವೆ,
ನನ್ನ ನೆನಪಿನಂಗಳದ ಎರಡು
ಗುಲಾಬಿ ಕಥೆಗಳು, ನೆನಪುಗಳು.
ನನ್ನೊಳಗೇ ಮೊಗ್ಗುಕಟ್ಟಿ,ಬಲಿತು,
ಬಿರಿದು, ತನ್ನಿರುವ ಸೂಸಲು
ಪ್ರತೀ ಕ್ಷಣ
ಘಮ ಘಮಿಸುವ,ನನ್ನೆದೆಯ
ಬಯಲಲ್ಲಿ
ನಾನೇ ನೀರೆರೆದು ಬೆಳೆದೆರಡು
ಗುಲಾಬಿ
ಹೂಗಳು, ಅವಳು ಮತ್ತು
ಇವಳು.

ಅವಳು...
ಕಣ್ಣಿಗೆ ಬಿದ್ದ ಬಣ್ಣ ಬಣ್ಣದ
ಗುಲಾಬಿಗಳ ಕಡ್ಡಿ
ತಂದು ನನ್ನ
ತೋಟದಲ್ಲೆಲ್ಲಾ ನೆಟ್ಟು,
ನೀರೆರೆದು, ಪೋಷಿಸಿ, ಬೆಳಗೆದ್ದರೆ ನೋಡಿ,
ಮಾತಾಡಿಸಿ ಬಿಟ್ಟ ಹೂಗಳ ಸವರಿ,ಕೀಳದೇ
ಅದರ ಚಂದವನ್ನಷ್ಟೇ, ಕಣ್ತುಂಬಿಕೊಳ್ಳುವವಳು.
ಮತ್ತೆರಡು ಹೂಗಳ ಹೆತ್ತುಕೊಟ್ಟವಳು.
ಇವಳು...ಗುಲಾಬಿ ಚಿತ್ರ ಬಿಡಿಸುತ್ತಾ,
ಅರಳದ ಹೂವಿನ ಕವನ ಹೊಸೆಯುತ್ತಾ,
ಹಿಂದೊಮ್ಮೆ ಜೋಡಿಸಿಟ್ಟ ಹೂ ಕುಂಡ,
ಗುಚ್ಛಗಳ ನೆನಪ ಬದಿಗೆ ಸರಿಸುತ್ತಾ,
ಕಥೆ ಬರೆಯುತ್ತಾ, ತಾನೇ ಅನುಭವಿಸುತ್ತಾ
ಗುಲಾಬಿಯಾದವಳು.
ನಮ್ಮಿಬ್ಬರಿಗೆ ಹುಟ್ಟದ ಮಗುವಿಗೆ ಕುಲಾವಿ
ಹೊಲೆಯುತ್ತಿರುವವಳು.

ಹೇ ಚಿಟ್ಟಾಣೀ...

ನಾವಿಬ್ಬರೂ ಈಗ ಸರಿ ಸಮಾನರು!
ನೀನು ಹೂವ ಮಾರಿದೆ ನನಗೆ,
ನಿನ್ನಿಂದಿನ ಹಸಿವ ನೀಗಿಸಿಕೊಂಡೆ.
ನನ್ನ ಹೂಗಳ ನೆನಪ ಕೊಟ್ಟೆ ನಿನಗೆ,
ನನ್ನಿಂದಿನ ನೆನಪ ಬೇಗೆ ನಾ ಕಳಕೊಂಡೆ.
ನಮ್ಮಿಬ್ಬರ ಮುಂದಿನ ದಾರಿಯೊಂದೇ.

ನಾನು ಮತ್ತೆ ಬರುವೆ ನಾಳೆ.
ನಿನ್ನ ಹೂ ಕೊಳ್ಳಲು ಅಲ್ಲಾ ಕೋತೀ ಮರೀ.
ನನ್ನ ಶಾಲೆಗೆ ಕರೆದೊಯ್ಯಲು ಪುಟ್ಟಾ...
ನಿನ್ನ ಬಾಳ ದಾರಿಯಲ್ಲಿ ಅರಳಲೀ
ಅಕ್ಷರಗಳೆಂಬ ಗುಲಾಬೀ ಹೂಗಳು...
ನೋಡಲ್ಲೀ... ಹಸಿರು ದೀಪಾ....

ಹೀಗೊಂದು ಅನುಭವ

ಆಶಾರಾಣಿ

ನಾನು ಹಾಗೂ ಸ್ನೇಹಿತರಾದ ಆರ್‌ಕೆ ಮತ್ತು ಗುರು ಕೆಂಬಾವಿಯ ಹಿಲ್‌ಟಾಪ್‌ನ ಗುಲಬರ್ಗಾ ಹೊಟೆಲ್‌ಗೆ ರಾತ್ರಿಯ ಊಟಕ್ಕೆ ಹೊಗಿದ್ದೆವು. ಮೂರು ಜನ ಒಂದೇ ಟೇಬಲ್‌ನಲ್ಲಿ ಕುಳಿತು ನಮ್ಮ ಹಿಂದಿನ ಅನುಭವ, ಓದು ಇವುಗಳ ಬಗ್ಗೆ ಮಾತಾಡುತ್ತಾ ಊಟ ಮುಗಿಸಿದೆವು. ನಾವು ಕುಳಿತ ಟೇಬಲ್ ಎದುರು ಗೋಡೆಯ ಮೇಲೆ ತೂಗಿಹಾಕಿದ್ದ ಬೋರ್ಡಿನಲ್ಲಿ ತಟ್ಟೆಯಲ್ಲಿ ಕೈತೊಳೆಯಬಾರದು ಎಂಬ ಸೂಚನೆ ಇತ್ತು. ಅದನ್ನು ಪಾಲಿಸಲು ನಾನು ಹಾಗೂ ಆರ್‌ಕೆ ಕೈತೊಳೆಯಲು ಹೊರ ನಡೆದೆವು. ಗುರುರಾಜ್‌ರವರು ತಮ್ಮ ಬಿಲ್ ಕಟ್ಟುತ್ತಿದ್ದರು. ನಾನೂ ಆತುರಪಟ್ಟು, ನನ್ನ ಮೋಬೈಲ್ ಟೇಬಲ್ ಮೇಲೆ ಇಟ್ಟಿರುವುದುದನ್ನು ಮರೆತು, ಬಿಲ್ ಕಟ್ಟಲು ಧಾವಿಸಿದೆ. ನನ್ನ ಕೆಲಸ ಮುಗಿಸುತ್ತಲೆ ಮೊಬೈಲ್ ಟೇಬಲ್ ಮೇಲೆ ಬಿಟ್ಟಿರುವುದು ಗಮನಕ್ಕೆ ಬಂದು ಅಲ್ಲಿಗೆ ಧಾವಿಸಿದೆ. ಟೇಬಲ್ ಬಳಿ ನಾನಿಟ್ಟಲ್ಲಿ ಮೊಬೈಲ್ ಕಾಣಲಿಲ್ಲ, ಹೋಟೆಲ್ ಮಾಲಿಕನ ಬಳಿ ನಾನು, 'ಇಲ್ಲಿ ನನ್ನ ಫೋನ್ ಇಟ್ಟಿದ್ದೆ, ಅದು ಕಾಣುತ್ತಿಲ್ಲ, ನೀವೇನಾದರೂ ನೋಡಿದಿರಾ?' ಕೇಳಿದೆ. ಆಗ ಮಾಲಿಕ ತಮ್ಮ ದೊಡ್ಡ ದೇಹಕ್ಕೆ ತಕ್ಕ ಏರು ಧ್ವನಿಯಲ್ಲಿ 'ಇಲ್ಲಿ ಯಾವ ಫೋನೂ ಇರಲಿಲ್ಲ, ನೀವೇ ಅದನ್ನ ನಿಮ್ಮ ಮನೆಯಲ್ಲಿ ಬಿಟ್ಟಿರಬಹುದು, ಇಲ್ಲ ನಿಮ್ಮ ಬ್ಯಾಗ್‌ನಲ್ಲಿ ಇರಬಹುದು ನೋಡಿ, ನಾವು ಇದುವರೆಗೂ ಎಷ್ಟೋ ಜನ ಬಿಟ್ಟುಹೋದ ಫೋನ್‌ಗಳನ್ನು ನೋಡಿ, ಅದನ್ನು ಜ್ಞಾಪಿಸಿ ಹಿಂತಿರುಗಿಸಿದ್ದೇವೆ' ಎಂಬ ಸಮಜಾಯಿಸಿ ನೀಡಿದರು. ಅವರ ಮಾತನ್ನು ಕೇಳಿದ ನಾನು ನನ್ನ ಬ್ಯಾಗ್‌ನಲ್ಲಿ ಇದ್ದರೆ ಎಂದು ಎಲ್ಲರ ಮುಂದೆಯೇ ಹುಡುಕಿ ನೋಡಿದೆ. ನನ್ನ ನೆನಪು ಪದೆಪದೆ ನಾನು ಫೋನ್ ಟೇಬಲ್ ಮೇಲೆಯೇ ಇಟ್ಟಿರುವುದುನ್ನು ಒತ್ತಿ ಹೇಳುತ್ತಿತ್ತು. ಇಷ್ಟು ಘಟನೆಯ ಆರಂಭದ ಒಂದೈದು ನಿಮಿಷಗಳ ವಿವರವಾಗಿದೆ.

ಫೋನ್‌ನ ಮೇಲೆ ನನಗಿದ್ದ ಭಾವನಾತ್ಮಕ ಸಂಬಂಧದ ಕಾರಣವಾಗಿ ನಾನು ಉದ್ವೇಗಕ್ಕೆ ಒಳಗಾಗತೊಡಗಿದೆ. ಇದನ್ನು ಗಮನಿಸಿದ ಆರ್‌ಕೆ 'ನೀವು ಉದ್ವೇಗಕ್ಕೆ ಒಳಗಾಗಬೇಡಿ. ಅದಕ್ಕೆ ಪರ್ಯಾಯಾವನ್ನು ನೋಡೋಣ ಎಂದು ಸಮಜಾಯಿಸಿದರು. ಗುರು ನನ್ನ ಫೋನ್ ನಂಬರ್ ತಗೆದುಕೊಂಡು ಪದೆಪದೆ ಕರೆ ಮಾಡುವ ಪ್ರಯತ್ನದಲ್ಲಿ ಇದ್ದರು. ಆದರೆ ಅಷ್ಟರಲ್ಲೆ ಫೋನ್ ನೀವು ಕರೆಮಾಡಿದ ಚಂದಾದಾರರು ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ ಎಂಬ ಉತ್ತರವನ್ನು ನೀಡುತ್ತಿತ್ತು. ಈ ಉತ್ತರವು ಮೊದಲಿಗೆ, ನೀವು ಬೇರೆಲ್ಲಾದರು ಮೊಬೈಲ್ ಬಿಟ್ಟಿರಬಹುದು' ಎಂದು ಒಂದೆ ಉಸಿರಿಗೆ ಹೇಳಿದ್ದ ಹೋಟೇಲ್ ಮಾಲಿಕನ ಮೇಲಿನ ನನ್ನ ಅನುಮಾನವನ್ನು ಇನ್ನು ಗಟ್ಟಿಮಾಡಿತು.

ಈ ಹೋಟಲ್‌ನಲ್ಲಿ ನಮ್ಮನ್ನು ಹೊರತು ಪಡಿಸಿ ಇನ್ನಿಬ್ಬರು ಮಾತ್ರ ಊಟ ಮಾಡುತ್ತಿದ್ದರು. ಗುರು ವಿನಂತಿಸಿ, ಅನುಮಾನ ಪರಿಹಾರಕ್ಕೆ ಎನ್ನುತ್ತ ಅವರ ಜೋಬು ತಡಕಿ ಅವರಲ್ಲಿ ಫೋನ್ ಇಲ್ಲದಿರುವುದನ್ನು ಖಚಿತ ಪಡಿಸಿಕೊಂಡರು.

ನಮ್ಮ ಪ್ರಯತ್ನ ನಿಲ್ಲದೇ ಮುಂದುವರೆಯಿತು. ಹೊಟೇಲ್ ಮಾಲಿಕನ ಏರು ಧ್ವನಿಯ ಮಾತುಗಳು ಹಾಗೆಯೇ ಮುಂದುವರೆದಿತ್ತು. ಈ ಹಿಂದೆ ನನ್ನ ಸ್ನೇಹಿತೆಯ ಜೀವನದಲ್ಲಿ ಇಂತಹದೇ ಘಟನೆಯೊಂದು ನಡೆದಿತ್ತು. ಹೋಗಿಯೆ ಬಿಟ್ಟಿತು ಎಂದ ಮೋಬೈಲ್ ಪರಿಸ್ಥಿತಿಯ ಸೂಕ್ಷ್ಮ ಅವಲೋಕನದಿಂದ ಸಿಗುವಂತಾಗಿತ್ತು. ಹಾಗಾಗಿ ಆ ಅನುಭವದ ನೆನಪಿನಿಂದ ತಳಮಳದ ಮಧ್ಯೆಯೂ ಧೈರ್ಯಪಡುತ್ತಿದ್ದೆ. ಫೋನ್ ಸಿಗದೇ ಹೊದರೆ ಎಂದು ಮನಸ್ಸು ಕುಗ್ಗುವುದು, ತುಂಬ ಅಳು ಬರುವುದು, ಆ ಮಧ್ಯೆ, ಅತ್ತರೆ ದೌರ್ಬಲ್ಯವನ್ನು ವ್ಯಕ್ತಪಡಿಸಿದಂತಾಗುತ್ತದೆ ಎಂದುಕೊಂಡು ನನ್ನನ್ನು ನಾನೇ ಸಮಜಾಯಿಕೊಳ್ಳುವುದು ಪರ್ಯಾಯವಾಗಿ ನಡೆಯಿತು. ಗೋಳಾಡಿ ಕೇಳುವುದು, ಬೇಡಿಕೊಳ್ಳುವುದು, 'ನಿಮಗೆ ಗೊತ್ತು ಕೊಡಿ' ಎನ್ನುವುದರ ಪಟ್ಟು ನಾನು ಬಿಡಲೆ ಇಲ್ಲ.

ಹೀಗೆ ನಡೆಯುತ್ತಿರುವಾಗ ಅಪರಿಚಿತ ವ್ಯಕಿಯೊಬ್ಬರು ಹೊಟೇಲ್‌ಗೆ ಬಂದರು. ನಮ್ಮ ಮತ್ತು ಮಾಲೀಕರ ನಡುವಿನ ಸಂಘರ್ಷವನ್ನು ನೋಡಿ 'ನೀವು ನಿಮ್ಮ ಫೋನನ್ನು ಜಾಗರೂಕತೆಯಿಂದ ಇಟ್ಟುಕೊಳ್ಳಬೇಕು, ನೀವು ಎಲ್ಲೋ ಬಿಟ್ಟು ಅಮಾಯಕರ ಮೇಲೆ ಅರೋಪ ಮಾಡಬಾರದು' ಎಂದು ಹಿಂದುಮುಂದಿಲ್ಲದೆ ಪರವಹಿಸಿ ಮಾತಾಡಿದರು. ಅವರ ಮಾತುಗಳನ್ನು ಸಾವಧಾನದಿಂದ ಕೇಳಿಸಿಕೊಂಡ ನಾನು, 'ನೋಡಿ ನೀವು ಈಗತಾನೇ ಬಂದಿದ್ದೀರಾ, ಇಲ್ಲಿ ಏನು ನಡೆಯಿತು ಎಂದು ಸರಿಯಾಗಿ ವಿಚಾರಿಸದೇ ಮಾತನಾಡಬೇಡಿ' ಎಂದು ಉತ್ತರಿಸುತ್ತಾ ಅಲ್ಲಿ ನಡೆದ ಘಟನೆಯ ಬಗ್ಗೆ ಮೂವರೂ ಕೂಡಿ ವಿವರಿಸಿದೆವು.

ಮಾಲಿಕರು ತಾವು ಫೋನ್ ತಗೆದುಕೊಂಡಿಲ್ಲ ಎಂಬ ಅಂಶವನ್ನು ಮತ್ತೆಮತ್ತೆ ಹೇಳುತ್ತಾ, 'ನಿಮಗೆ ಅನುಮಾನವಿದ್ದರೆ

ನಮ್ಮ ಮನೆಯನ್ನು ಚೆಕ್ ಮಾಡಿ' ಎಂದರು. ಆ ಒಂದು ಎಳೆಯನ್ನು ಹಿಡಿದ ಗುರು, 'ಸರಿ, ನಾವು ಚೆಕ್‌ಮಾಡುತ್ತೇವೆ, ಇದು ನಮ್ಮ ಅನುಮಾನ ಪರಿಹಾರಕ್ಕೆ, ಏನೂ ತಪ್ಪು ತಿಳಿಯಬಾರದು' ಎಂದು ನನ್ನನ್ನು ಒಳಗೆ ಕಳುಹಿದರು. ನಾನೂ ನನ್ನ ದುಗುಡದ ಮಧ್ಯೆ, 'ತಾವು ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ' ಎನ್ನುತ್ತಾ ಮುಂದುವರೆದೆ.

ಅದೇ ವೇಳೆ ಆರ್‌ಕೆಯವರು ಸ್ಥಳೀಯ ಮಾರ್ಗದರ್ಶಿಯರನ್ನು ಸಂಪರ್ಕಿಸುತ್ತಾ, ನಡೆದ ಘಟನೆಯನ್ನು ವಿವರಿಸುತ್ತಾ, ಪವನ್ ಎಂಬ ಸ್ಥಳೀಯ ಪ್ರಭಾವಿ ಪತ್ರಕರ್ತರಿಂದ ಮಾಲಿಕರ ಜೊತೆ ಮಾತಾಡಿಸಿದರು. ಇದು ನಮಗೂ ಸ್ಥಳೀಯರ ಸಂಪರ್ಕವಿದೆ ಎಂಬ ಒತ್ತಡವನ್ನು ತಂದಿತು. ನಮ್ಮ ನಿರಂತರ ಪ್ರಯತ್ನ, ಒತ್ತಾಯ, ನಂಬಿಕೆಯ ಧಾಟಿ ಮತ್ತು ಕ್ರಮೇಣ ಜನ ಸೇರುತ್ತ ಮೌನವಾಗಿ ಪರಿಸ್ಥಿತಿಯ ಅವಲೋಕನ ಮಾಡುತ್ತಿದ್ದುದು ಎಲ್ಲೋ ಪರಿಸ್ಥಿತಿಯನ್ನು ನಮ್ಮ ಕಡೆ ಧನಾತ್ಮಕ ಮಾಡಿತು ಅನಿಸುತ್ತದೆ. ಮಾಲೀಕನೂ ಆತನ

ಹೋಟೇಲಲ್ಲಿ ಜನರ ಮಧ್ಯೆ ಒತ್ತಡ ಅನುಭವಿಸುವಂತಾಯಿತು. ಪರಿಸ್ಥಿತಿ ಒಟ್ಟಾರೆ ಗುಂಪಿನ ಕಡೆ ವಾಲದಂತೆ ನಾವೂ ಜಾಣತನ ತೋರಿದ್ದೆವು.

ನಾನು ಮನೆ ಚೆಕ್ ಮಾಡುತ್ತಿರುವಾಗಲೇ ಅಪರಿಚಿತ ಆಗಂತುಕ ವ್ಯಕ್ತಿ, ಸನ್ನಿವೇಶವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಂಡವರಂತೆ, ನಮ್ಮನ್ನು, 'ಇಲ್ಲಿ ಬನ್ನಿ' ಎಂದು ಕರೆದು 'ನಿಮ್ಮ ಫೋನ್ ಎಲ್ಲಿಯೂ ಹೋಗುವುದಿಲ್ಲ, ನಿಮ್ಮ ಅದೃಷ್ಟ ಇದ್ದರೆ ಅದು ಬೆಳಿಗ್ಗೆಯ ಸಮಯಕ್ಕೆ ನಿಮ್ಮ ಕೈಸೇರುತ್ತದೆ. ಮಂಜುನಾಥನೆ ಇದಕ್ಕೆ ಸಾಕ್ಷಿ' ಎಂದು ಮಾರ್ಮಿಕವಾಗಿ ನುಡಿದರು. 'ನೀವು ಇನ್ನು ಹೊರಡಿ' ಎಂದರು. ನಾನು, ಆರ್‌ಕೆ ಮತ್ತು ಗುರು ಜೊತೆ ಮನಸ್ಸಿಲ್ಲದೆ ಹೊರನಡೆದೆ. ಆರ್‌ಕೆ, 'ನೀವು ಧೈರ್ಯ ಕಳೆದುಕೊಳ್ಳಬೇಡಿ, ಇಎಂಐ ನಂಬರ್ ಕೊಟ್ಟು ಪೋಲೀಸ್ ಕಂಪ್ಲೈಂಟ್ ಕೊಡೋಣ' ಎಂದರೆ ಗುರು ಬೇರೆಯವರಲ್ಲಿ 'ಫೋನ್ ಟ್ರೇಸ್ ಮಾಡಿಸೋದು ಸಾಧ್ಯವಾಗುತ್ತೆ' ಎಂದು ಹೇಳುತ್ತಿದ್ದರು.

ಆ ವೇಳೆ ಅಚಾನಕ್ಕಾಗಿ ಐದಾರು ಹೆಜ್ಜೆ ದೂರ ಬೆಳಕು ಬೀಳುತ್ತಿದ್ದ ಸ್ಥಳದಲ್ಲಿ ಸೇರಿದ ಯುವಕರ ಗುಂಪಿನಿಂದ ಒಬ್ಬಾತ, ಒಂದು ಫೋನ್ ಕೈಯಲ್ಲಿ ಹಿಡಿದು, 'ಇದು ಯಾರದು' ಎಂದ. ಅದು ನನ್ನ ಫೋನೇ ಆಗಿತ್ತು. ನಾವು, ನಮ್ಮಂತ ಇತರರು, ಹತ್ತಾರು ಭಾರಿ ತಿರುಗಾಡಿದ್ದ ಅಲ್ಲಿ ಸ್ವಿಚಾಫ್‌ಗೊಂಡ ಫೋನ್ ಹೇಗೆ ಪ್ರತ್ಯಕ್ಷವಾಯಿತು ಎಂಬುದಕ್ಕೆ ಉತ್ತರವಿರಲಿಲ್ಲ, ಫೋನ್ ಮರಳಿ ಪಡೆದ ನನ್ನ ಖುಷಿಗೆ ಅದು ಮುಖ್ಯವೂ ಆಗಲಿಲ್ಲ. ಧೂಳು ಕಾಲ್ತುಳಿತಗಳಿಂದ ಅದು ನಲುಗಿರಲಿಲ್ಲವಲ್ಲ ಎಂದೂ ಖುಷಿಯಾಯಿತು.

ಅಷ್ಟಾದಾಗ ಮಾಲಿಕರಿಗೆ ಮೊದಲಿಗಿಂತಲೂ ಹೆಚ್ಚಿನ ಏರು ಧ್ವನಿ ಬಂತು. 'ನೀವು ನಮ್ಮನ್ನು ಅನುಮಾನಿಸಿದ್ದಿರಿ' ಎಂದು ಬಹಳವೆ ಸಮೀಪಕ್ಕೆ ಏರಿ ಬಂದರು. ತಾವೇನು ಅಪರಾಧ ಮಾಡಿಲ್ಲ ಎಂಬ ಮರ್ಜಿ ತೋರಿದರು. ಅವರ ಹೆಂಡಿರು ಮಕ್ಕಳೂ ಸೇರಿಕೊಂಡರು. ನಾನು ಅವರ ಮಾತಿಗೆ ಕಿವಿಕೊಡದೇ, ನಾನು ತಪ್ಪು ಮಾಡಿದೆ ಎಂಬ ಭಾವನೆಗೆ ಪಕ್ಕಾಗದೆ, ಅವರ ಮನಸ್ಸಿಗೆ ಈ ಘಟನೆಯಿಂದ ನೋವುಂಟಾಗದಿರಲಿ ಎಂದು ನಾಟಕೀಯವಾಗಿ ಕಾಲಿಗೆ ಬಿದ್ದಂತೆ ಬಾಗಿ ಅವರಲ್ಲಿ ಕ್ಷಮೆ ಯಾಚಿಸಿದೆ.



HOPE…

Randeep Kaur

Dripping hope in every word they said, *"Hope in their action, Hope in their thoughts and Hope in every step they walked. "*

Public Schools Teachers spread enormous vibrancy and reflected their urge for English Language learning.

This was a pool of resource teachers who participated in a three day professional development forum co organized by Azim Premji Foundation & District Institute for Education & Training (DIET) at the Azim Premji Foundation Udham Singh Nagar District Institute.

Teachers debated, discussed and showed keenness in building a conceptual clarity of how the language used in the school society connects or disconnects children from attending the schools.

They were able to figure out the importance of *Language Acquisition Support System (LASS)* for activating *Language Acquisition Device (LAD)* in a human child. Teachers were able to see the merit of using the child's language as an important resource for creating child's interest in classroom situations.

Taking *Multilinguality* as a tool, teachers presented a few pedagogical activities that they thought could be done with children in the classroom situation. Example: Word web with different languages and role plays using diverse languages.

Teachers reflected inquisitiveness while they opened layers of how a particular language makes or breaks the standard connotations of learning in a particular school society. They also went deeper into understanding how the child's language builds her identity and if ignored in the classroom situations, causes a lot of stress for the child.

Teachers showed curiosity as they grabbed possibilities of engaging in discussions to understand the subtle yet strong impacts of languages on the society. Their enthusiasm surfaced as they took part in various activities and discussions actively.

Hope was the key attribute that sparkled. There was enough scope and readiness to learn, *teachers were able to relate to the undermining belief that children should not be taught only using school language.*

A little push and direction can support teachers to drive through the meandering and challenging roads to make the school society a strong vehicle of change.

**LASS: A System in the environment that supports language acquisition.*
**Multilinguality: Using multiple languages.*
**LAD: Language Acquisition Device*

ನಂಬಿಕೆ ಎಂಬ ಫಲಿತ

♥ ಶೌರೀಶ್ ಕುದ್ಕುಳಿ



ಜಗತ್ತು ಇಂದು ಒಂದು ತೆರನಾದ 'ವಿಶ್ವಾಸ'ದಿಂದ ಮುನ್ನಡೆಯುತ್ತಿದೆ. ಪ್ರತಿದಿನ ರಾತ್ರಿ ಬೆಳಗಾಗುವುದು ಎಷ್ಟು ಸತ್ಯವೋ, ಅಷ್ಟೇ ನೈಜವಾಗಿ ಜಗತ್ತು ಇಂದು ಪ್ರತಿದಿನ ಏಳುತ್ತಿದೆ... ವ್ಯವಹರಿಸುತ್ತಿದೆ... ಮತ್ತು ಮಲಗುತ್ತಿದೆ...! ಇದು ನಂಬಿಕೆ ಮತ್ತು ಭರವಸೆಗಾಗಿ..! ಜಗತ್ತಿನಲ್ಲಿ ನಾಗರಿಕ ಎನಿಸಿಕೊಂಡ ಜನತೆ, ತಮ್ಮ ದೈನಂದಿನ ಬದುಕನ್ನು ಸಾಗಿಸುವ ಹಂತದಲ್ಲಿ ಇಂತಹ ನಂಬಿಕೆಯಿಂದಲೇ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾರೆ. ನಾವೆಲ್ಲರೂ ಉತ್ತಮ ಜೀವನಕ್ಕಾಗಿ ಬದುಕುತ್ತಿದ್ದೇವೆ ಎಂಬ ನಂಬಿಕೆ ಇಲ್ಲಿ ಕೆಲಸ ಮಾಡುತ್ತದೆ. ನಾಳೆ ಎಂಬ ದಿನದ ಬಗ್ಗೆ, ನಿರ್ಭಿಡತೆಯಿಂದ ಚಿಂತಿಸುವ ಮತ್ತು ಆ ವ್ಯವಸ್ಥೆಯಲ್ಲಿ ಬದುಕುವ ನಂಬಿಕೆಯನ್ನು ಜನತೆ ಇಂದು ಪಡೆದುಕೊಂಡಿದ್ದಾರೆ. ಓರ್ವ ಮನುಷ್ಯ, ಮತ್ತೋರ್ವನ ಮೇಲೆ ಇರಿಸಿದ 'ನಂಬಿಕೆ' ಅಥವಾ 'ವಿಶ್ವಾಸ'ದಿಂದ ಇಂತಹ ಕಾರ್ಯ ಸಾಧ್ಯವಾಯಿತು. ಇದು ನಾಗರಿಕ ಪ್ರಪಂಚದ ಸಂಕೇತವೂ ಹೌದು. ಆದರೆ ನಾಗರಿಕತೆ ವಿಕಾಸಗೊಳ್ಳುತ್ತಾ ಹೋದಂತೆ, ವ್ಯಕ್ತಿ ಅಥವಾ ಸಮುದಾಯದ ಗುಂಪುಗಳು 'ಅಸ್ತಿತ್ವ' ಮತ್ತು 'ವ್ಯವಸ್ಥೆ'ಯ ಸೆಳೆತಕ್ಕೆ ಸಿಲುಕಿ, ಅನೇಕ ಕೆಟ್ಟ ಕಾರ್ಯಗಳನ್ನು ಎಸಗಿದ ಉದಾಹರಣೆಗಳಿವೆ. ಉದಾಹರಣೆಗೆ, ಕಳ್ಳತನ, ಸುಳ್ಳು ಹೇಳುವುದು, ಕೊಲೆ, ಅತ್ಯಾಚಾರ, ಮೋಸ ಇತ್ಯಾದಿಗಳು. ಇಂತಹ ಅನೇಕ ಮಾದರಿಯ ಕೃತ್ಯಗಳನ್ನು ಅಂದಿನ ಸಮಾಜಗಳು ಅಪರಾಧ ಎಂದು ಗುರುತಿಸಿ, ಸೂಕ್ತ ಶಿಕ್ಷೆಯನ್ನು ನಿಗದಿಗೊಳಿಸಿದ್ದವು. ಆದರೆ ಇಂದು, ಅಪರಾಧ ಪ್ರಕರಣಗಳಲ್ಲಿ ಸಮಗ್ರವಾದ ಬದಲಾವಣೆಯಾಗಿದ್ದು, ಅಮಾನವೀಯ, ಹಿಂಸಾತ್ಮಕ ಅಪರಾಧಗಳು ಹೆಚ್ಚು ಹೆಚ್ಚು ಕಂಡುಬರುತ್ತಿವೆ. ಈ ಎರಡೂ ಹಂತಗಳಲ್ಲಿಯೂ 'ನಂಬಿಕೆ' ಎಂಬ ಅಗೋಚರ ಶಕ್ತಿ ಕೆಲಸ ಮಾಡುತ್ತದೆ. ಕಳ್ಳನೋರ್ವ ಅತಿಯಾದ ವಿಚಾರವಂತಿಕೆಯಿಂದ ಕಳ್ಳತನಕ್ಕೆ ಮುಂದಾಗಿ, ಸ್ವಲ್ಪ ಎಚ್ಚರ ತಪ್ಪಿದರೆ, ಮುಂದೆ ಒದಗಬಹುದಾದ ಪರಿಣಾಮದ ಬಗ್ಗೆ ಅರಿವಿದ್ದು, ನಂಬಿಕೆಯ ಆಧಾರದಲ್ಲಿ ಕಾರ್ಯವೆಸಗಲು ಮುಂದಾಗುತ್ತಾನೆ. ಇದು ಆತನ ಸ್ವ–ನಂಬಿಕೆ ಅಥವಾ ವಿಶ್ವಾಸ. ಆದರೆ ಕಳ್ಳನೋರ್ವ ಕಳ್ಳತನ ಮಾಡುವ ತಂಡದ ಭಾಗವಾದಾಗ ಮಾತ್ರ 'ಸಮೂಹ ನಂಬಿಕೆ'ಯಲ್ಲಿ ವಿಶ್ವಾಸವನ್ನಿಡುತ್ತಾನೆ.

ನಂಬಿಕೆ ಎನ್ನುವಂತಹದ್ದು, ಕಣ್ಣಿಗೆ ಸುಲಭವಾಗಿ ನಿಲುಕದಂತಹದ್ದು. ನಾವು ಮಾಡುವ ಕಾರ್ಯಗಳ ಮುಖೇನ, ಆ ಕಾರ್ಯಗಳು ಅನುಷ್ಠಾನಗೊಂಡು, ಪ್ರತಿಫಲನಗೊಳ್ಳುವ ಮೂಲಕ 'ನಂಬಿಕೆ' 'ಅಪನಂಬಿಕೆ'ಗಳು ಗುರುತಿಸಲ್ಪಡುತ್ತವೆ. ನಂಬಿಕೆ ನಿಜಕ್ಕೂ ಫಲಿತದ ಮುಖಾಂತರ ಅನಾವರಣಗೊಳ್ಳುತ್ತದೆ. ಸ್ವಾಮಿ ವಿವೇಕಾನಂದರು ಒಂದೆಡೆ ನಾಸ್ತಿಕರೆಂದರೆ ಯಾರು ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, 'ಯಾರಿಗೆ ತನ್ನಲ್ಲಿ ತನಗೇ ನಂಬಿಕೆಯಿಲ್ಲವೋ ಅವನು ನಾಸ್ತಿಕ. ಹಳೆಯ ಧರ್ಮಗಳು ಹೇಳಿದವು, ದೇವರನ್ನು ನಂಬದವನು ನಾಸ್ತಿಕ ಎಂದು. ಹೊಸ ಧರ್ಮವು ಹೇಳುತ್ತದೆ, ಯಾರಿಗೆ ತನ್ನಲ್ಲಿ ನಂಬಿಕೆಯಿಲ್ಲವೊ ಅವನು ನಾಸ್ತಿಕ ಎಂದು' ಎಂಬುದಾಗಿ ಹೇಳುತ್ತಾರೆ. ನಂಬಿಕೆ ಎನ್ನುವಂತಹದ್ದು, ಹಲವು ಸಂದರ್ಭಗಳಲ್ಲಿ ವಿಭಿನ್ನವಾಗಿ ಫಲಿತಗೊಳ್ಳುವುದನ್ನು ನಾವು ಕಾಣಬಹುದು. ಕೂಡು ಕುಟುಂಬದಿಂದ ಸಂಕೀರ್ಣವಾದ ನ್ಯೂಕ್ಲಿಯರ್ ಅಥವಾ ವಿಭಕ್ತ ಕುಟುಂಬ ವ್ಯವಸ್ಥೆ ಢಾಳಾಗಿ ಆಚರಣೆಯಲ್ಲಿರುವ ಇಂದಿನ ಪರಿಸ್ಥಿತಿಯಲ್ಲಿ,

ತಾಯಿ ಮಗಳ ಮೇಲೆ ಇಟ್ಟಿರುವ ನಂಬಿಕೆ, ಹೆಂಡತಿಗೆ ಗಂಡನ ಮೇಲಿರುವ ವಿಶ್ವಾಸ ಇವೆಲ್ಲವೂ ಕ್ಷಣ ಕ್ಷಣದ ವಿಷಯಗಳಾಗುತ್ತವೆ. ದೊಡ್ಡ ದೊಡ್ಡ ವ್ಯಾಪಾರ ಮಾಲ್‌ಗಳ ಸಮ್ಮುಖ, ಓರ್ವ ಕಿರಾಣಿ ಅಂಗಡಿಯವನಿಗೆ ತನ್ನ ವ್ಯಾಪಾರ ವೃದ್ಧಿಯಾಗಿ, ಜೀವನ ನಡೆಸುವ ನಂಬಿಕೆ ಈಗಲೂ ಉಳಿದಿದೆ ಎಂದಾದಲ್ಲಿ, ಅದಕ್ಕೆ ಆತನಲ್ಲಿ ಉಳಿದ ಸ್ಥೈರ್ಯ ಮತ್ತು ಜನಸಮುದಾಯದ ಬೆಂಬಲವೇ ಕಾರಣ. ಸರಕಾರದ ಮೇಲೆ ಜನಸಮುದಾಯದ ನಂಬಿಕೆ, ಆ ಸರಕಾರ ಕೈಗೊಳ್ಳುವ ಜನಪರ ನಿಲುವು ಮತ್ತು ನೀತಿ ನಿಯಮಗಳ ಮೇಲೆಯೇ ಆಧರಿತವಾಗಿರುತ್ತದೆ.

ಗುಡ್ಡಗಾಡು ಜನಾಂಗ, ಪ್ರಕೃತಿಯ ಆಗುಹೋಗುಗಳ ಬಗ್ಗೆ ನಿಗಾ ಇರಿಸಿ, ಕಣಿವೆ ಕಂದರವೆಂದು ಲೆಕ್ಕಿಸದೆ, ಅರಣ್ಯದ ಸೂಕ್ಷ್ಮಗಳನ್ನು ಅರಿಯುವ ಪ್ರಕ್ರಿಯೆಯಲ್ಲಿ 'ನಂಬಿಕೆ'ಯೇ ಪ್ರಧಾನ ವಸ್ತುವಾಗುತ್ತದೆ. ದೇಹ ದಂಡಿಸಲ್ಪಟ್ಟು, ವಿಶ್ರಾಂತಿ ಬಯಸಿದಾಗ, ಮಲಗಿದ ವ್ಯಕ್ತಿಯೋರ್ವ ಮರುದಿನ ಬೆಳಿಗ್ಗೆ ಏಳುತ್ತೇನೆಂಬುದೂ ನಂಬಿಕೆಯಿಂದಲೇ..! ಹಲವಾರು ಅಡೆತಡೆಗಳಿದ್ದರೂ, ಗಂಡು ಹೆಣ್ಣನ್ನು ಪ್ರೀತಿಸುವುದು, ಆಕೆ ತನ್ನ ಪ್ರೀತಿಯನ್ನು ಸ್ವೀಕರಿಸಬಹುದು ಎಂಬ ನಂಬಿಕೆಯಿಂದಲೇ.....! ಸಾಧುವೋರ್ವ ತನ್ನ ಜೀವನ ಪರ್ಯಂತ ಸರ್ವಸಂಗ ಪರಿತ್ಯಾಗಿ ಎನಿಸಿಕೊಳ್ಳುವುದು, ಜೀವನದ ಸಾಕ್ಷತ್ಕಾರದ ದಿನಗಳು ತನಗೆ ದೊರಕುವುದು ಎಂಬ ಭರವಸೆಯಿಂದಲೇ...! ರೈತನೋರ್ವನ ಹೊಲದಲ್ಲಿ, ಇರುವೆಗಳು ಮಳೆಯ ಸೂಚನೆಯನ್ನರಿತು, ಮೊಟ್ಟೆಗಳನ್ನು ಸಾಲ ಸಾಲಾಗಿ ಪೇರಿಸಿ, ಸೂಕ್ತ ಸ್ಥಳಕ್ಕೆ ಕೊಂಡೊಯ್ಯುವುದು, ನಾಳೆಯ ಬದುಕಿನ ಭರವಸೆಗಾಗಿ...! ಹೆಣ್ಣೊಂದು ಸುಮಾರು ಒಂಭತ್ತು ತಿಂಗಳುಗಳ ಕಾಲ ಮಗುವನ್ನು ಜಾಗ್ರತೆಯಿಂದ ತನ್ನ ಉದರದಲ್ಲಿ ಕಾಪಾಡಿಕೊಳ್ಳುವುದು, ತನ್ನ ಮಗು ಸುರಕ್ಷಿತವಾಗಿ ಜನ್ಮ ತಾಳಲೆಂಬ ನಂಬಿಕೆಯಿಂದ...! ತನ್ನ ಕುಟುಂಬ ಮತ್ತು ದೇಶದ ಸಂಪೂರ್ಣ ಹೊಣೆಗಾರಿಕೆಯನ್ನು ಗಮನದಲ್ಲಿರಿಸಿ, ಮಳೆ, ಬಿಸಿಲು, ಚಳಿಯೆನ್ನದೆ ದುಡಿಯುವ ಅದೆಷ್ಟೋ ಸೈನಿಕರು, ದೇಶದ ನಾಳೆಯ ಬದುಕಿನ ಭರವಸೆಗಾಗಿ ಇರಿಸಿದ ನಂಬಿಕೆಯೇ ಪ್ರಧಾನವಾಗುತ್ತದೆ. ಹಾಗೆಯೇ, ಹಸುವೊಂದು ಮಾನವನಿಗೆ ಹಾಲನ್ನು ನೀಡುವಾಗ, ತನಗೇನೂ ಮಾನವ ಮಾಡಲಾರನು ಎಂಬ ನಂಬಿಕೆಯಿಂದಲೇ..!

ಜೀವನದ ಕಟ್ಟ ಕಡೆಯಲ್ಲಿಯೂ, ತಾನು ಮತ್ತು ತನ್ನ ಕುಟುಂಬ ಸುಖವಾಗಿರಬೇಕೆಂಬ ನಂಬಿಕೆಯ ನೆರಳಿನಲ್ಲಿಯೇ, ಕುಟುಂಬಗಳು ಸಂಪತ್ತನ್ನು ಕ್ರೋಢೀಕರಿಸುತ್ತವೆ. ಪ್ರತಿ ಸಮಾಜವೂ ತಾನು ಆಚರಿಸಿಕೊಂಡು ಬಂದ ಕಟ್ಟುಪಾಡು, ಆಚರಣೆ, ಪದ್ಧತಿ, ರೂಢಿ, ನಿಯಮ, ನಡಾವಳಿಗಳು ಇಂದು 'ನಂಬಿಕೆ'ಯಾಧಾರದಲ್ಲಿಯೇ ರೂಪುಗೊಂಡಿವೆ. ಅದೇ ರೀತಿ, ಓರ್ವ ವ್ಯಕ್ತಿಗೆ ತನ್ನ ಮನಸ್ಸಿನ ಸಂವೇದನೆಗಳನ್ನು ಮತ್ತೋರ್ವನೊಡನೆ ಸ್ವಚ್ಛಂದವಾಗಿ ಹಂಚಿಕೊಳ್ಳಬಹುದೆಂಬ ಧೈರ್ಯ ಹುಟ್ಟಿಕೊಳ್ಳುವುದು ನಂಬಿಕೆಯಾಧಾರದಲ್ಲಿ..! ನಂಬಿಕೆಗಳು ಇಂದು ಶಿಥಿಲಗೊಳ್ಳುತ್ತಿವೆ; ಸಮುದಾಯವನ್ನು ಬಿಟ್ಟು ವ್ಯಕ್ತಿಗತವಾಗಿ ಅವುಗಳು ಕ್ಷೀಣಿಸುತ್ತಾ ಸಾಗುತ್ತಿವೆ ಎಂಬ ಚಿಂತನೆಗಳು ಪ್ರಸ್ತುತ ವಾಗ್ವಾದಕ್ಕೆ ಎಡೆಮಾಡಿಕೊಡುತ್ತಿವೆ. ಸಂಪ್ರದಾಯವಾದಿಗಳು ಮತ್ತು ಉದಾರವಾದಿಗಳು, 'ನಂಬಿಕೆ' ಎಂಬ ಅಗೋಚರವಾದ ವಿಷಯಕ್ಕಾಗಿ ಕಿತ್ತಾಡುವುದು ಪ್ರತಿ ಹಂತದಲ್ಲಿಯೂ ಸರ್ವೇ ಸಾಮಾನ್ಯ ಎಂಬಂತಾಗಿದೆ.

ಪ್ರತಿ ಧರ್ಮ ಮತ್ತು ಮತವೂ, ಒಂದು ನಿರ್ಧಿಷ್ಟ ದಿನ ಯಾ ಸಮಯವನ್ನು ಹೊಸ ವರ್ಷದ ಪ್ರಾರಂಭದ ದಿನವನ್ನಾಗಿ ಪರಿಗಣಿಸಿ, ಅದನ್ನು ಹುಮ್ಮಸ್ಸಿನಿಂದಲೇ ಆಚರಿಸಿಕೊಳ್ಳುತ್ತವೆ. ಕ್ರಿಶ್ಚಿಯನ್ ಮತಾಧಾರಿತವಾಗಿ ಹೇಳುವುದಾದರೆ, ಪ್ರತಿ ವರ್ಷ ದಶಂಬರ 31ಕ್ಕೆ ಹಳೆ ವರ್ಷ ಕಳೆದು, ಜನವರಿ 1ಕ್ಕೆ ಹೊಸ ವರ್ಷ ಪ್ರಾರಂಭವಾಗುತ್ತದೆ. ಈ ಸಂದರ್ಭದಲ್ಲಿ ನಮ್ಮ ನಿರೀಕ್ಷೆಗಳು, ನಂಬಿಕೆಗಳು ಹೊಸದಾಗಿ ಪುಟಿದೆದ್ದು, ವರ್ಷದ ಕೊನೆಯ ಭಾಗದಲ್ಲಿ, ಕ್ಷೀಣಿಸುತ್ತಾ ಸಾಗುವ ಪರಿ ತುಂಬಾ ಆಭಾಸವನ್ನುಂಟುಮಾಡುತ್ತದೆ. ನಂಬಿಕೆಗಳು ವಿಶ್ವಾಸದ ಪ್ರತೀಕವಾಗಿ, ಜಗತ್ತು ಮುಂದುವರಿಯಲು ನಾವು ಅನುವು ಮಾಡಿಕೊಡಬೇಕು. ಮುಂದಿನ ಜನಾಂಗಕ್ಕೆ ಸಾಂಸ್ಕೃತಿಕ ಅನನ್ಯತೆಯನ್ನು ದಾಟಿಸುವ ಹಂತದಲ್ಲಿ, ನಂಬಿಕೆಯೂ ಅದರ

ಭಾಗವಾಗಿರುವಂತೆ ನೋಡಿಕೊಳ್ಳಬೇಕಾದದ್ದು, ನಮ್ಮೆಲ್ಲರ ಜವಾಬ್ದಾರಿಯಾಗಬೇಕಾಗಿದೆ. ಜೊತೆಗೆ ಉತ್ತರದಾಯಿತ್ವವೂ ಹೌದು.

ಒಂದು ಬೆಕ್ಕಿನ ಆತ್ಮಕಥೆ

ರಾಮಕೃಷ್ಣ ಭಟ್

ಭಾಗ ೧: ಪೇಟೆಯಿಂದ ತೋಟಕ್ಕೆ

ಒಂದು ಬೆಕ್ಕು ಹೀಗೆ ತನ್ನ ಕಥೆ ಹೇಳಿಕೊಳ್ತದೆ:

"ನಾನು ಹುಟ್ಟಿ ಮೊದಲಿಗೆ ಕಣ್ಣು ಬಿಟ್ಟಾಗ ಇಬ್ಬರು ಪುಟ್ಟ ಮಕ್ಕಳ ಬೊಗಸೆಯೊಳಗಡೆ ಇದ್ದೆ. ಅವರ ಕಣ್ಣುಗಳು ನನ್ನನ್ನೆ ಎವೆಇಕ್ಕದೆ ನೋಡುತ್ತಿದ್ದವು. ಅವರ ನೋಟದಲ್ಲಿ ಕೊನೆಯೆ ಇಲ್ಲದ ಪ್ರೀತಿ ಇತ್ತು. ಅದರಿಂದ ಭದ್ರ ಅನಿಸಿದ ನನಗೆ ಮುಂದೆ ಭಯವೆ ಇಲ್ಲದ ಹಾಗಾಯ್ತು.

ಆ ಇಬ್ಬರು ಪುಟಾಣಿಗಳ ಮನೇಲಿ ಎತ್ತಿನ ಗಾಣ ಇತ್ತು. ಅವರ ಮನೆಯವರು ಗಾಣಿಗರು. ಅಲ್ಲಿ ಹಿಂಡಿ ಮತ್ತು ಇಲಿಗಳು ಬೇಕೆನಿಸುವಷ್ಟಿದ್ದವು. ಅವುಗಳನ್ನು ತಿಂದು ಮೈಕೈ ತುಂಬಿಕೊಂಡು ಸುಂದರವಾಗಿದ್ದ ಅಮ್ಮನ ಮಗಳು ನಾನು.

ಒಂದು ದಿನ ಅಲ್ಲಿಗೆ ಎತ್ತಿನ ಗಾಣದಲ್ಲೆ ಎಣ್ಣೆ ತೆಗೆಸುತ್ತೇನೆಂಬ ಒಬ್ಬ ಮನುಷ್ಯ ಮುಂಜಾನೆ ಬಹಳ ಬೇಗನೆ ಕೊಬ್ಬರಿ ಹೊತ್ತು ಬಂದ. ಗಾಣ ತಿರುಗಿಸುವುದಕ್ಕೆ ಮುರುಗಣ್ಣ ಬಿಸಿಲೇರುವವರೆಗೂ ಕಾಯುತ್ತಾರೆ. ಯಾಕೆಂದರೆ ಆಮೇಲೆಯೆ ಎಣ್ಣೆ ಚೆನ್ನಾಗಿ ಬಿಡುವುದು. ಹಾಗಾಗಿ ಬಂದವರಿಗೆ 'ನಿಮ್ಮ ಕೊಬ್ಬರಿಯನ್ನು ಅಂಗಳದ ಬಿಸಿಲಲ್ಲಿ ಹರವಿಕೊಳ್ಳಿ' ಎಂದು ತಿಳಿಸಿ, ಅದಾದಾಗ, 'ಮನೆಯ ಜಗಲಿಯ ಮೇಲೆ ಕೂತಿರಿ' ಎಂದಿದ್ದರು.

ನಾನು ಅಲ್ಲೆ ಅಮ್ಮನ ಹಿಂದೆ ಅಡ್ಡಾಡುತ್ತಿದ್ದೆ. ಅದರಿಂದ ಅಲ್ಲಿರುವ ಯಾರಿಗೂ ತೊಂದರೆಯಾಗುತ್ತಿರಲಿಲ್ಲ. ಅಮ್ಮನಂತೆ ನನಗೂ ಭಯವಿಲ್ಲದೆ ಇರುವುದು ಅಭ್ಯಾಸವಾಗಿತ್ತು. ಹಾಗಿರುವಾಗ ಆ ಆಗಂತುಕನ ದೃಷ್ಟಿ ನನ್ನ ಮೇಲೆ ಬಿತ್ತು, ಮಾತ್ರವಲ್ಲ ನನ್ನನ್ನು ಅವನ ಮನೆಗೆ ಒಯ್ಯುವುದಕ್ಕು ಇಚ್ಚಿಸಿದ.



ನನಗೂ ಅಮ್ಮನಂತೆ ಸುಪುಷ್ಟ ರೋಮವಿತ್ತು. 'ಅಮ್ಮನ ಮಗಳೆ' ಅಂತ ನನ್ನನ್ನು ಅಕ್ಕರಿಸಿ ಆ ಬಾಲೆಯರು ಕರೆಯುತ್ತಿದ್ದರು. ತಾವು ತಿನ್ನುವಾಗ ಮಾತ್ರವಲ್ಲದೆ, ನನ್ನನ್ನು ಹಿಡಕೊಂಡು ಮುದ್ದಿಸಬೇಕು ಅನಿಸಿದಾಗೆಲ್ಲ ನನಗೆ ಬಿಸ್ಕತ್ತು ಕೊಟ್ಟು ತಿನ್ನಿಸಿ ಅದರಿಂದ ನಾನೆಷ್ಟು ದಪ್ಪಗಾದೆ ಎಂದು ಕುಣಿಯುತ್ತಿದ್ದರು. ನನ್ನ ಮೈಯ ಸಿನುಗನ್ನು ಎತ್ತಿಕೊಂಡಾಗೆಲ್ಲ ಮೂಸಿಯೆ ಮೂಸುತ್ತಿದ್ದರು.

ಆ ಬಂದಾತ 'ಈ ಮರಿಯನ್ನು ಕೊಡುತ್ತೀರಾ?' ಎಂದು ಕೇಳಿದ. ಅದಕ್ಕೆ ಮನೆ ಅಜ್ಜಿ, ಸ್ವಲ್ಪ ಹಿಂದೆಮುಂದೆ ನೋಡಿ, 'ಅದು ಮಕ್ಕಳದ್ದು, ಅವರು ಶಾಲೆಗೆ ಹೋಗಿದ್ದಾರೆ, ಬರಲಿ, ಕೇಳಿ ಕೊಡುತ್ತೇವೆ' ಎಂದು ಆ ಮನೆಯ ಎಲ್ಲರ ಪರವಾಗಿ ಹೇಳಿದ್ದರು. ಅವರ ಮರದ ಗಾಣದ ರಿಪೇರಿಗೆ ಆಚಾರಿಗಳಿಲ್ಲದೆ, ಗಿರಾಕಿಗಳೂ ಇಲ್ಲದೆ, ಮುಚ್ಚುವುದಕ್ಕೆ ಮುಂದಾಗಿರುವಾಗ ಬಂದವರೊಬ್ಬರ ಕೋರಿಕೆಯನ್ನು ನಿರಾಕರಿಸಲಾಗದ ದಾಕ್ಷಿಣ್ಯದಲ್ಲಿ ಅವರು ಸಿಲುಕಿದ್ದರು. ಅವರ ಮಾತು ಕೇಳಿ ನನಗೇನು ಭಯವಾಗಲಿಲ್ಲ. ಮಕ್ಕಳ ಎದೆಗೆ ಆನಿಸಿಕೊಂಡು, ಅವರ ಹೆಗಲೇರಿಕೊಂಡು, ಊರೆಲ್ಲ ಸುತ್ತಿದ್ದ ನನಗೆ ಊರು ತಿರುಗುವ ಹುಚ್ಚಿತ್ತು. ಅಂತ ಸುತ್ತಾಟಗಳಲ್ಲಿ ಮಕ್ಕಳ ಮೇಲಿನ ಊರ ಜನರ ಪ್ರೀತಿ ನನಗೂ ಹಂಚಿಕೆಯಾಗುತ್ತಿತ್ತು.

ಆ ದಿನ ಶಾಲೆಗೆ ಹೋದ ಮನೆಮಕ್ಕಳು ಸಂಜೆಗೆ ವಾಪಾಸಾಗುವ ಮೊದಲೆ ಹಿಂದೆ ಹೋಗಿದ್ದ ಆ ಎಣ್ಣೆಯವರು ಇನ್ನೊಮ್ಮೆ ಬಂದರು, ಜೊತೆಗೆ ಅವರ ಹೆಂಡರೂ ಇದ್ದರು. ಪ್ರೀತಿಸುವುದಕ್ಕೆ ತಕ್ಕಂತಿದ್ದ ಆ ಮನುಷ್ಯನ ಗಡ್ಡ ನೋಡಿಯೋ ಅಥವಾ ತಮ್ಮ ಹಿರಿಯರ ನಿರಾಕರಿಸಲಾಗದ ಇಂಗಿತವನ್ನು ತಿಳಿದೋ ಮಕ್ಕಳು ಹಿಂದೆಮುಂದೆ ನೋಡದೆ ನನ್ನನ್ನು ಒಪ್ಪಿಸಿದರು. ಜೊತೆಗೆ, 'ಅವಳು ಒಬ್ಬಳೆ ಆಗಬಾರದು' ಎನ್ನುತ್ತ 'ಅವಳೊಂದಿನವನನ್ನು ಒಯ್ಯಿರಿ' ಎಂದು ನನಗಿಂತ ಚೂರು ದಪ್ಪವೆ ಇದ್ದ ನನ್ನ ತಮ್ಮನನ್ನು ಎತ್ತಿ ಕೊಟ್ಟರು. ಹಾಗೆ ಕೊಡುವ ಮೊದಲು ನನ್ನನ್ನು ಹಿಡಿದು ಹಿಂಡಿ ಎದೆ ಮುಖ ತಲೆಗೆ ನೆನಪನ್ನು ಅಚ್ಚಿಸಿಕೊಳ್ಳುವಂತೆ ಒತ್ತರಿಸಿಕೊಂಡಿದ್ದರು. ಆಗವರು ಎಳೆದ ದೀರ್ಘ ಉಸಿರು, ನನ್ನನ್ನು ನೆನೆಸುವಂತೆ ಹರಿಸಿದ ಉಸಿರಿನ ಬಿಸಿ ನನ್ನ ಧೈರ್ಯವನ್ನು ಇಮ್ಮಡಿಸಿ ಒಳಗೊಳಗೆ ಹಿಡಿಸಲಾಗದಷ್ಟು ಹಿತವಾಯ್ತು. ಬಂದವರಿಬ್ಬರು ಮಕ್ಕಳ ಕೈಯ ಕೆಂಪನ್ನೂ ಉಗುರಿನ ಚೆಂದವನ್ನೂ ನೋಡುತ್ತಾ, ಮಕ್ಕಳನ್ನೆ ಪಡೆದಂತೆ ತುಂಬಿಕೊಂಡ ಖುಷಿಯಿಂದ

ನಮ್ಮಿಬ್ಬರನ್ನು ಅವರ ಕೈಚೀಲದೊಳಗೆ ಜಾರಿಸಿಕೊಂಡರು. ಬಸ್ಸಿನಲ್ಲಿ ತಿನ್ನಿಸಿ ಎಂದು ಪೋರಿಯರು ಕೊಟ್ಟ ಎರಡು ಬಿಸ್ಕತ್ತನ್ನು ಇಟ್ಟುಕೊಂಡರು. ಆ ಮಕ್ಕಳು ನಮ್ಮನ್ನು ಒಳ್ಳೆಯವರಿಗಲ್ಲದೆ ಇನ್ನಾರಿಗು ಕೊಡರು ಎಂಬ ಭರವಸೆಯಲ್ಲಿ ಊರು ನೋಡುವ ಖುಷಿಯಲ್ಲಿ ನಾನು ಹೊರಟೆ.

ಬಸ್ಸಿನಲ್ಲಿ ಒಂದು ಪ್ರಸಂಗವಾಯಿತು. ನಾವಿಬ್ಬರು ಕಿರಿಕಿರಿ, ಸಂಕಟಪಡುತ್ತ ಚೀಲದಿಂದ ನುಸುಳಿ ತಲೆ ಹೊರಹಾಕಿ ಇಣುಕುವುದೂ ಕಂಡಕ್ಟರ ಚೀಟಿ ಕೇಳಿ ಬರುವುದೂ ಒಂದಾಯ್ತು. ನಮ್ಮನ್ನು ಕಂಡು ಅವನ ಅಧಿಕಾರ ಉಲ್ಲಂಘನೆಯಾದಂತೆ ಮುಖಹಿಂಡಿ 'ಪ್ರಾಣಿಗಳನ್ನು ಬಸ್ಸಿನಲ್ಲಿ ತರುತ್ತೀರಲ್ಲ, ಪ್ರಯಾಣಿಕರಿಗೆ ತೊಂದರೆಯಾದೀತು ಅನಿಸುವುದಿಲ್ಲವೆ' ಎಂದು ಹುಳಿತೇಗಿದಂತೆ ಮಾತಾಡಿದ. ನಮ್ಮನ್ನು ಹೀಗಳೆದ ಅವನನ್ನು ಕೊಂಚವೂ ಸಹಿಸದೆ ಅಮ್ಮ ಒಂದೆ ಉಸಿರಿಗೆ, 'ಈ ಬಸ್ಸಿನಲ್ಲಿ ಬರುವವರೆಲ್ಲ ನನಗೆ ಗೊತ್ತಿರುವವರೆ, ದಿನಾ ಓಡಾಡುವ ನಮಗೆ ನೀವೆ ಹೊಸಬರು. ಪ್ರಾಣಿಗಳಂತ ಬಸ್ಸಿನೊಳಗೆ ಅಲ್ಲಿಇಲ್ಲಿ ಬಿಟ್ಟಿಲ್ಲ, ನೋಡಿ, ನಮ್ಮ ತೊಡೆ ಮಡಿಲಲ್ಲೆ ಇರಿಸಿಕೊಂಡಿದ್ದೇವೆ. ಬೇಕೆಂದರೆ ಅವಕ್ಕು ಟಿಕೇಟು ಕೊಡಿ' ಎಂದರು. ಕಂಡಕ್ಟರ ಬಾಲ ಮಡಿಚಿಕೊಂಡು ಎರಡು ಮಾತಿಲ್ಲದೆ ಹೊರಟುಹೋಗಿದ್ದ. ಇದರಿಂದ ನನ್ನ ಮುಂದಲ ಬದುಕಿನ ಬಗೆಗಿನ ಭರವಸೆ ಸಕಾರಣ ಹೆಚ್ಚಿತು. ನನ್ನನ್ನು ಕರಕೊಂಡವರು ಅಮ್ಮ ಅಪ್ಪನಂತವರು ಎಂಬ ನಂಬಿಕೆ ಬಂತು.

ಬಸ್ಸಿಳಿದು ಅವರ ಮನೆಗೆ ನಡೆದು ಹೋಗುವ ದೂರವಿತ್ತು. ಅವರು ಒಂದೆ ಸವನೆ ಹರಟುತ್ತಿದ್ದರು. ಪರಸ್ಥಳ, ಪರ ಊರು ನಮಗೆ ಹೇಗಾದೀತು, ಅವರ ಮಗಳು ಕಾಲೇಜಿಂದ ರಜೆಗೆ ಮನೆಗೆ ಬಂದಾಗ ನಮ್ಮನ್ನು ಕೈಯಿಂದ ಇಳಿಸದೆ ಹೇಗೆ ಆದರಿಸಿಯಾಳು, ಮನೆಯಲ್ಲಿ ದನ ಕರು ಹಾಕಿದ್ದೂ ನಾವು ಮನೆಗೆ ಬರುತ್ತಿರುವುದೂ ಹೇಗೆ ಜೊತೆಯಾಯಿತು, ಅನ್ನಕ್ಕೆ ಎಣ್ಣೆ ಬೆರೆಸಿಯೆ ಕೊಡಬೇಕು, ಇತ್ಯಾದಿಯಾಗಿ ನಿಲ್ಲಿಸದೆ ಮಾತುಕತೆಯಾಡುತ್ತ ಅವರು ದಾರಿ ನಡೆಯುತ್ತಿದ್ದರು. ಛಳಿಗಾಳಿ ಕೈಕಾಲು ಕಚ್ಚುತ್ತಿರುವುದೂ, ನಕ್ಷತ್ರಗಳು ಮಿಣಿಮಿಣಿಗುಟ್ಟುತ್ತಿರುವುದನ್ನೂ ಹೇಳಿ ನಮ್ಮಂತೆ ತುಪ್ಪಳವಿರುವುದು ಎಷ್ಟು ಒಳ್ಳೆಯದೆಂದು ಆಡಿಕೊಂಡರು. ದೂರದಲ್ಲೆ ಬರುತ್ತಿರುವವರ ಮಾತು, ಮೈ ವಾಸನೆ ಹತ್ತಿದ ಮನೆ ನಾಯಿಗಳು ಮೊದಲಿಗೆ ಬೊಗಳಿ, ಮತ್ತೆ ಕುಂಯ್‌ಗುಟ್ಟಿದವು. ಮನೆಯವರು ಸಮೀಪಿಸಿದಾಗ ಕುಣಿದು ಉದುರಿಬೀಳುವ ಹಾಗೆ ಬಾಲವಾಡಿಸಿದವು.

ನಂತರ ನಾಯಿಗಳು ನಮ್ಮನ್ನು ನೋಡುವುದೂ ನಾವು ಪುಳುಕ್ಕನೆ ತಲೆಮರೆಸಿ ಚೀಲದೊಳಗೆ ಹುದುಗುವುದೂ ಒಮ್ಮೆಗೆ ಆಯಿತು. ಅವು ತಮ್ಮ ಚಹರೆ ಬದಲಾಯಿಸಿದ್ದೆ ಉದ್ರಿಕ್ತವಾಗಿ ಮಾಡಿನ ಹಂಚು ಹಾರುವ ಹಾಗೆ ಅಗ್ಗರಿಸತೊಡಗಿದವು. ಅಮ್ಮ ಅವಕ್ಕೂ ಮಿಗಿಲಾಗಿ ಗಂಟಲುಹರಿದು

'ಏಯ್, ನೀವು ಬೊಬ್ಬಿಟ್ರೆ ಮನೆಯೇನು ಹರ್‍ಕೊಂಡು ಬೀಳೋದಿಲ್ಲ, ನಮ್ಮ ಕಿವಿಯೂ ಹರಿದು ಹಾಳಾಗೋದಿಲ್ಲ, ಬಾಯ್‍ಮುಚ್ಕೊಂಡ್ ಸುಮ್ನಿದ್ರೆ ಸರಿಯೀಗ' ಎಂದು ಬಾಯಿಜೋರು ಮಾಡಿದರು.

ಮನೆಯೊಳಗೆ ಅಮ್ಮ ನಮ್ಮನ್ನು ಚೀಲದಿಂದ ಹೊರತೆಗೆದು, 'ನೋಡಿ ನಿಮ್ಮ ಮನೆಯನ್ನು' ಎನ್ನುತ್ತಾ ಒಂದು ಚಿಕ್ಕ ತಟ್ಟೆ ಹುಡುಕಿ, ಹಾಲು ಸುರಿದು, ಮಕ್ಕಳು ಕೊಟ್ಟಿದ್ದ ಬಿಸ್ಕತ್ತನ್ನು ಅದರೊಳಗೆ ನೆನೆಯುವಂತೆ ಹಾಕಿ ನಮ್ಮ ಮುಂದಿಟ್ಟರು. ಅವರ ಮಾತಿನ ಅಕ್ಕರೆಗೆ ಹಾಲಿಗೆ ಬಿದ್ದ ಬಿಸ್ಕತ್ತಿಗಿಂತಲು ಮುಂದಾಗಿ ನಾನು ಕರಗಿದೆ. ಆ ಮನೆಯೊಳಗೆ ಒಬ್ಬ ಅಜ್ಜಿಯೂ ಇದ್ದರು.......

ಶಾಲೆಯ ಮುಖ ಕಾಣದವರು

ಶ್ರೀಲತ ಕೆ ಎನ್

ಬಾಚಣಿಗೆ ಆಡಿಸದೆ, ಎಣ್ಣೆ ಕಾಣದ ಕೆದರಿದ ತಲೆಗೂದಲಿನ ಒಡತಿ ಆಕೆ. ಸೊಂಟದಿಂದ ಜಾರಿ ಹೋಗುತ್ತಿದ್ದ ಮಗುವನ್ನು ಸ್ವಸ್ಥಾನದಲ್ಲಿ ಕುಳ್ಳಿರಿಸಲು ಹೆಣಗಾಡುತ್ತಿದ್ದಳು. ಮೂಗಿನಿಂದ ಸುರಿಯುತ್ತಿದ್ದ ಸಿಂಬಳವನ್ನು ತಾನುಟ್ಟ ಲಂಗದ ತುದಿಯಿಂದ ಪದೇ ಪದೇ ಒರೆಸಿಕೊಳ್ಳುತ್ತಿದ್ದಳು. ಅವಳು ಲಕ್ಷ್ಮಿ. ತನ್ನಮ್ಮ ಹಡೆದ 6 ನೆಯ ಹೆಣ್ಣು ಮಗುವನ್ನು ಸೊಂಟಕ್ಕೇರಿಸಿಕೊಂಡಿರುವ ದೃಶ್ಯದಲ್ಲಿ, ಮನೆಗೆಲಸ ಅಥವಾ ಕಾಫಿ ತೋಟದಲ್ಲಿ ಕಾಫಿ ಹಣ್ಣು ಬಿಡಿಸುವ ದೃಶ್ಯಗಳಲ್ಲಿ ಆಕೆ ಕಾಣಿಸಿಕೊಳ್ಳುತ್ತಿದ್ದಳು. ಆ ದಿನದ ಗಂಜಿಗಾಗಿ 1ಸೇರು ಅಕ್ಕಿಯನ್ನು ಸಾಲವಾಗಿ ಪಡೆಯಲು ಲಕ್ಷ್ಮಿ ಮನೆಗೆ ಬಂದಿದ್ದಳು. ನಾನಾಕೆಯತ್ತ ಕುತೂಹಲದ ದೃಷ್ಟಿ ಬೀರಿದ್ದೆ. 12–13 ರ ಪ್ರಾಯದ ಆಕೆ ತೊಟ್ಟಿದ್ದುದು ತನ್ನಮ್ಮ ಚಿನ್ನುವಿನ ಬ್ಲೌಸ್. ಅದರೊಳಗೆ ಇನ್ನೊಬ್ಬರು ನುಸುಳಬಹುದಾದಷ್ಟು ದೊಗಳೆಯಾಗಿತ್ತದು. ಕೆಳಗೆ ಧರಿಸಿದ್ದ ತೆಳುವಾದ ಉದ್ದನೆಯ ಲಂಗದೊಳಗಿನಿಂದ ಕಾಲುಗಳ ಆಕೃತಿಗಳು ಕಂಡುಬರುತ್ತಿದ್ದವು. ನಗ್ನವಾದ ಹೊಟ್ಟೆಯ ಭಾಗ, ಈ ವೇಷ ಭೂಷಣ ತಮಾಷೆಯಾಗಿ ಕಂಡು ಬಂದಿತ್ತು. ಬಡತನದ ಕ್ರೂರ ಮುಖದ ಪ್ರತೀಕ ಈ ಉಡುಪು ಎಂಬ ಅರಿವು ನನಗಿತ್ತು. ನಾನು ಮತ್ತು ಲಕ್ಷ್ಮಿ ಒಂದೇ ವಯಸ್ಸಿನವರು. ನನ್ನಮ್ಮನ ಗಮನಕ್ಕೆ ಬಾರದಂತೆ ಎಂದಿನಂತೆ ಹೆಚ್ಚುವರಿಯಾಗಿಯೇ ಒಂದಿಷ್ಟು ಅಕ್ಕಿಯನ್ನು ಕೊಟ್ಟು ಲಕ್ಷ್ಮಿಯನ್ನು ಸಾಗಹಾಕಿದ್ದೆ.

ಲಕ್ಷ್ಮಿಯ ಅಮ್ಮ ಚಿನ್ನು. ಸದಾ ಕೊಳಕಾದ ಬಿಳಿಯ ಮುಂಡು [ಪಂಚೆ] ಹಾಗೂ ತನ್ನದೆ ಮುಚ್ಚಲೊಂದು ಮೆರೂನ್ ಕಲರ್ ಬ್ಲೌಸ್ ತೊಡುತ್ತಿದ್ದಳು. ಈ ವ್ಲೇಷ ಭೂಷಣದಿಂದಾಗಿ ಮೇಲ್ನೋಟಕ್ಕೆ ಆಕೆಯನ್ನು ಮಲಯಾಳಿಯೆಂದು ಗುರುತಿಸಬಹುದಿತ್ತು. ಗಂಡು ಮಗುವೊಂದರ ಆಸೆಯಿಂದಾಗಿ 6 ಹೆಣ್ಣು ಮಕ್ಕಳಿಗೆ ಜನ್ಮಕೊಟ್ಟು ಮತ್ತೊಮ್ಮೆ ಗರ್ಭ ಧರಿಸಿದ್ದ ಚಿನ್ನು ಕುಟುಂಬ ಯೋಜನೆಗೆ ಒಳಪಡದಿರುವ ಬಗ್ಗೆ ಅನೇಕರ ಮಾತಿನ ಸರಕಾಗಿದ್ದಳು. ಕೊಡಗಿನ ಕಾಫಿ ತೋಟವೊಂದರಲ್ಲಿ ನಮ್ಮ ನೆರೆ ಮನೆಯಲ್ಲಿ ಚಿನ್ನು ನೆಲೆಸಿದ್ದಳು. ತೋಟ ಕಾರ್ಮಿಕಳಾಗಿ ಕಾಲನಿ ಅವಳ [ಕಾಫಿ ತೋಟದ ಒಳಗೆ ಕಾರ್ಮಿಕರ ವಾಸಕ್ಕಾಗಿ ಉದ್ದಕ್ಕೆ ಕಟ್ಟಿರುವ ಸಾಲು ಮನೆಗಳು] ವಾಸಸ್ಥಾನವಾಗಿತ್ತು. ತನ್ನ ಮಕ್ಕಳಲ್ಲಿ ಯಾರೊಬ್ಬರನ್ನೂ ಶಾಲೆಗೆ ಸೇರಿಸಿರಲಿಲ್ಲ. ಕಾರಣ ಕೇಳಿದರೆ ಮಲಯಾಳಂ ಶಾಲೆ ಇಲ್ಲವೆಂದೂ, ತನ್ನ ಮಕ್ಕಳಿಗೆ ಮಲಯಾಳಂ ಕಲಿಸುವ ಆಸಕ್ತಿ ಹೊಂದಿರುವುದಾಗಿ ನುಡಿಯುತ್ತಿದ್ದಳು. ಆಕೆಯ ಮಾತಿಗೆ ಕೆರಳುತ್ತಿದ್ದ ನನ್ನಮ್ಮ ಕಾಫಿ ತೋಟಗಳ ಒಡೆಯರಾಗಿರುವ ಮಲಯಾಳಿಗರು ತಮ್ಮ ಮಕ್ಕಳನ್ನು ಕನ್ನಡ ಭಾಷಾ ಶಾಲೆಯಲ್ಲಿ ಓದಿಸುತ್ತಿರುವುದನ್ನು ಉದಾಹರಿಸುತ್ತಾ ಚಿನ್ನುವನ್ನು ಕೆಣಕುತ್ತಿದ್ದರು. ಅದರಲ್ಲೇನು ವಿಶೇಷ, ಅವರೆಲ್ಲಾ ಶ್ರೀಮಂತರೆಂಬ ತನ್ನ ಸಿದ್ಧ ಉತ್ತರವನ್ನು ಚಿನ್ನು ನೀಡುತ್ತಿದ್ದಳು.

ಇಂತಹ ಸಂಭಾಷಣೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಲಕ್ಷ್ಮಿಯ ಕಳೆಗುಂದಿದ ಮುಖ ಹಾಗೂ ತಾನು ಶಾಲೆಗೆ ಸೇರಬೇಕೆಂಬ ಇಚ್ಚೆ ವ್ಯಕ್ತಪಡಿಸುತ್ತಾ ತನ್ನ ದಿನಚರಿಯನ್ನು ಹಳಿದುಕೊಳ್ಳುತ್ತಿದ್ದ ಅವಳ ಮಾತುಗಳು ನೆನಪಾಗುತ್ತಿದ್ದವು. ಅದರೊಂದಿಗೆ ಲಕ್ಷ್ಮಿಯಂತೆ ಶಾಲೆಗೆ ಹೋಗದ ಕಾಫಿ ತೋಟದ ಮತ್ತಷ್ಟು ಮಕ್ಕಳ ಚಿತ್ರಣ ಮೂಡುತ್ತಿತ್ತು.

ನಾನು ಹೈಸ್ಕೂಲ್ ಸೇರಿದ ನಂತರ ಲಕ್ಷ್ಮಿಯಂತಹ ಸಾಕಷ್ಟು ಮಕ್ಕಳನ್ನು ಗಮನಿಸಿದೆ. ನಾವು ನೆಲೆಸಿದ್ದ ಕಾಫಿ ತೋಟ ಮಾತ್ರವಲ್ಲ, ಸುತ್ತಮುತ್ತಲಿನ ಗ್ರಾಮಗಳ ಕಾಫಿ ತೋಟಗಳ ಮಕ್ಕಳು, ಅದೇ ಊರುಗಳಲ್ಲಿ ನೆಲೆಸಿದ್ದ ದಲಿತ ಕುಟುಂಬಗಳ ಮಕ್ಕಳು ಕೂಡಾ ಶಾಲೆಗೆ ಹೋಗುತ್ತಿರಲಿಲ್ಲ. ಈ ಸಮಸ್ಯೆ ನಮ್ಮೂರು, ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಾತ್ರವಲ್ಲ, ಕೊಡಗಿನಾದ್ಯಂತ ಇರುವ ಬಡ ಕುಟುಂಬಗಳ ಸಮಸ್ಯೆ ಎಂಬ ಅರಿವು ಕ್ರಮೇಣ ನನಗಾಯಿತು. ನನ್ನ ಸ್ಮೃತಿಯಲ್ಲಿ 1973 ರಿಂದ 1983ರ ತನಕ ಈ ದೃಶ್ಯ ವ್ಯಾಪಕವಾಗಿ ಕಣ್ಣಿಗೆ ಕಟ್ಟುತ್ತಿತ್ತು.

ನಂತರ ಕೊಡಗಿನ ಗಿರಿಜನರ ಹಾಡಿಗಳಿಗೆ ಕಾಲಿಡುವ ಅವಕಾಶ ಒದಗಿ ಬಂದಿತ್ತು. ಒಂದೊಂದು ಹಾಡಿಯಲ್ಲಿದ್ದ 40–50 ಮಕ್ಕಳ ಪೈಕಿ ಬೆರಳೆಣಿಕೆಯಷ್ಟು ಮಕ್ಕಳು ಮಾತ್ರ ಶಾಲೆಗೆ ಹೋಗುತ್ತಿದ್ದರು. ಕಾಫಿ ತೋಟಗಳಲ್ಲಿ ಕಂಡುಬರುತ್ತಿದ್ದ ದೃಶ್ಯಕ್ಕಿಂತಲೂ ಇದು ಕಠಿಣವೆನಿಸುತ್ತಿತ್ತು.

ಬದುಕಿನ ಪಯಣದಲ್ಲಿ ಕೊಡಗು ಜಿಲ್ಲೆಯಿಂದ ಮುಂದೆ ನಾನು ಕಾಲಿಟ್ಟದ್ದು ಶಿವಮೊಗ್ಗ ಜಿಲ್ಲೆಗೆ. 1987 ರಿಂದ 1995ರ ತನಕ ಈ ಜಿಲ್ಲೆಯಲ್ಲಿ ನೆಲೆಗೊಂಡಿದ್ದೆ. ಈ ಅವಧಿಯಲ್ಲಿ ಲಂಬಾಣಿ ತಾಂಡ, ಬೋವಿ ಕಾಲನಿಗಳಲ್ಲಿ ಕೊಡಗಿನ ಕಾಫಿತೋಟ, ಗಿರಿಜನರ ಕಾಲನಿಗಳಲ್ಲಿ ಕಂಡಿದ್ದ ಶಾಲೆ ಕಾಣದ ಮಕ್ಕಳ ಅದೇ ಮುಖಗಳನ್ನು ಮತ್ತೆ ನೋಡಿದೆ. ಈ ಮಧ್ಯೆ ಕೇರಳದ ಕಾಸರಗೋಡಿಗೆ 1992 ರಲ್ಲಿ ಮೊದಲ ಬಾರಿಗೆ ಭೇಟಿ ನೀಡಿದೆ. ಶಾಲೆಯಿಂದ ಹೊರಗುಳಿದ ಒಂದೇ ಒಂದು ಆರೋಗ್ಯವಂತ ಮಗು ಕೂಡಾ ಗ್ರಾಮದಲ್ಲಾಗಲಿ, ಮನೆಗಳಲ್ಲಾಗಲಿ ಕಾಣ ಸಿಗಲಿಲ್ಲ .

ಮಂಡ್ಯ, ತುಮಕೂರು, ಹಾಸನ ಜಿಲ್ಲೆಗಳಲ್ಲಿ ಅಡ್ಡಾಡುತ್ತಾ ಉತ್ತರ ಕನ್ನಡ ಜಿಲ್ಲೆಗೆ ಕಾಲಿಡುವ ಸಂದರ್ಭ ಒದಗಿ ಬಂತು. ಈ ಜಿಲ್ಲೆಯಲ್ಲಿ ಪರಿಸ್ಥಿತಿ ಸುಧಾರಿಸಿದೆ ಅನಿಸಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳು ಇಲ್ಲವೇ ಇಲ್ಲ ಎನ್ನುವ ವಾದ ಮಂಡಿಸುವವರಿದ್ದಾರೆ. ಆದರೆ ಅಂಕಿ ಅಂಶಗಳು ಇದನ್ನು ದೃಢೀಕರಿಸುತ್ತಿಲ್ಲ. ಈ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಶೇಕಡವಾರು ಪ್ರಮಾಣ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕಡಿಮೆ ಇದೆ ಅಷ್ಟೇ. [ಈಗಿನ ಅಂಕಿಅಂಶಗಳ ಪ್ರಕಾರ 686]

4 ತಿಂಗಳ ಹಿಂದೆ ನಾನು ಬಂದಿಳಿದುದು ಗುಲ್ಬರ್ಗ ಜಿಲ್ಲೆಗೆ. ಗುಲ್ಬರ್ಗದಿಂದ ಯಾದಗಿರ್ ಜಿಲ್ಲೆಯ ಸುರಪುರಕ್ಕೆ ಭೇಟಿ ನೀಡಿದ ಸಂದರ್ಭ. ಮಕರ ಸಂಕ್ರಾಂತಿಯ ಹಿಂದಿನ ದಿನ, ಸುಮಾರು 10 ವರ್ಷ ಪ್ರಾಯದ ಹೆಣ್ಣುಮಗಳೊಬ್ಬಳು 10 ಕಿಲೋ ಗ್ರಾಂ ಭಾರವಿರಬಹುದಾದ ಚೀಲವೊಂದನ್ನು ತಲೆ ಮೇಲೆ ಹೊತ್ತು ರಸ್ತೆ ದಾಟಿದಳು. ಸ್ವಲ್ಪ ಹೊತ್ತಿನಲ್ಲಿ ಪ್ರಯಾಣಿಕರನ್ನು ತುಂಬಿಕೊಂಡು ಬಂದು ನಿಂತ ಟಂ ಟಂ ಏರಿ ಕುಳಿತ ಆಕೆ ತನ್ನ ಪ್ಲಾಸ್ಟಿಕ್ ಚೀಲವನ್ನೆತ್ತಿ ಗಾಡಿಯೊಳಗಿರಿಸಿದಳು. ಸುರಪುರ ಪಟ್ಟಣಕ್ಕೆ ಬಂದು ನಿಂತ ಟಂ ಟಂ ನಿಂದಿಳಿದ ಆಕೆ 5ರೂ. ಗಳನ್ನು ಚಾಲಕನ

ಕೈಗಿತ್ತಳು. ತನ್ನ ಚೀಲವನ್ನೆತ್ತಿ ತಲೆ ಮೇಲಿರಿಸಿಕೊಂಡ ಆಕೆ ಸ್ವಲ್ಪ ದೂರ ಸಾಗಿ ತರಕಾರಿ ಮಾರುತ್ತಾ ಕುಳಿತಿದ್ದ ಅಜ್ಜಿಯೊಬ್ಬಾಕೆಯ ಬಳಿ ಚೀಲವನ್ನಿಳಿಸಿ ತಾನೂ ಕುಳಿತುಕೊಂಡಳು. ಆಗ ವೇಳೆ ಅಪರಾಹ್ನ3-30. ಆ ಹುಡುಗಿ ವಿಜಯಲಕ್ಷ್ಮಿ, 4ನೆಯ ತರಗತಿಯ ವಿದ್ಯಾರ್ಥಿನಿ. ಆ ದಿನ ಶಾಲೆಗೆ ಚಕ್ಕರ್ ಹೊಡೆದು ತನ್ನ ತಾಯಿಯೊಂದಿಗೆ ಅವರೆಕಾಯಿ ಬಿಡಿಸಿ ಚೀಲವೊಂದರಲ್ಲಿ ತುಂಬಿ ತರಕಾರಿ ಮಾರುವ ತನ್ನಜ್ಜಿಯ ಬಳಿಗೆ ತಲುಪಿಸಿದ್ದಳು. ಅವರೆ ಕಾಯಿಯ ಬೆಲೆ ಆ ದಿನ 80-00ರೂಪಾಯಿ. ಈ ಪ್ರದೇಶದಲ್ಲಿ ಹತ್ತಿ ಬಿಡಿಸುವುದು, ಕೊಯ್ಲು, ನಾಟಿ, ಕಳೆ ಇತ್ಯಾದಿ ಒಂದಿಲ್ಲೊಂದು ಕೃಷಿ ಕೆಲಸಗಳಿರುವ ಸಂದರ್ಭಗಳಲ್ಲಿ ಮಕ್ಕಳು ಊರು, ಹೊಲ, ತೋಟ, ಗದ್ದೆ, ಮನೆ ಎಲ್ಲೆಂದರಲ್ಲಿ ಕಾಣಸಿಗುತ್ತಾರೆ. .

ಕೊಡಗು, ಚಿಕ್ಕಮಗಳೂರು, ಹಾಸನ ಇತ್ಯಾದಿ ಜಿಲ್ಲೆಗಳಲ್ಲಿರುವ ಕಾಫಿ, ಭತ್ತ, ಶುಂಠಿ ಬೆಳೆಗಳಿಗೆ ಅಗತ್ಯವಾಗಿ ಬೇಕಾಗುವ ಕಾರ್ಮಿಕರನ್ನು ಸಮೀಪದ ಗಡಿ ಜಿಲ್ಲೆಗಳ ಆಯ್ದ ಭಾಗಗಳಿಂದ ಕೊಂಡೊಯ್ಯುವ ವಾಡಿಕೆ ಇದೆ.

ಗ್ರಾಮಗಳಿಗೆ ಮುಂಜಾನೆ ವೇಳೆಯಲ್ಲಿ ಕಾರ್ಮಿಕರನ್ನು ಕರೆದೊಯ್ಯಲೆಂದು ಜೀಪ್, ಟೆಂಪೋಗಳ ಆಗಮನವಾಗುತ್ತದೆ. ಸಂಜೆ ಕೆಲಸ ಮುಗಿದ ನಂತರ ವಾಪಾಸ್ ಇದೇ ಗಾಡಿಗಳಲ್ಲಿ ಜನರನ್ನು ಸ್ವಸ್ಥಾನಕ್ಕೆ ತಂದುಬಿಡಲಾಗುತ್ತದೆ. ಈ ಪರಿಪಾಠ ಸುರಪುರದ ಸುತ್ತಮುತ್ತಲಿನ ಕೆಲವು ಕಡೆಗಳಲ್ಲಿ ಕೂಡಾ ಇದೆ. ಇಲ್ಲಿ ವ್ಯತ್ಯಾಸವಿಷ್ಟೇ- ಬುತ್ತಿ ಗಂಟಿನೊಂದಿಗೆ ಪಾಲಕರೊಂದಿಗೆ ಟಂ ಟಂ ಗಳನ್ನೇರಿ ಹೊರಡುವ ಮಕ್ಕಳು ಬೆಳಗಿನಿಂದ ಸಂಜೆಯವರೆಗೂ ತಮ್ಮ ಕರ್ಮಭೂಮಿಯಲ್ಲಿ ದುಡಿಯುತ್ತಾರೆ. ಹೀಗೆ ಕೆಲಸಕ್ಕೆ ಹೊರಡುವ ಮಕ್ಕಳಲ್ಲಿ ಹೆಣ್ಣು ಮಕ್ಕಳಿದ್ದು ಗುಂಪಿನಲ್ಲಿ 10-15 ಮಂದಿ ಮಕ್ಕಳಿರುತಾರೆ. ನಾಟಿ ಸಂದರ್ಭದಲ್ಲಿ ಗುಂಪಿನಲ್ಲಿ ಹಿರಿಯಳಾದ ಒಬ್ಬಾಕೆ ಗದ್ದೆಗಳನ್ನು ಗುತ್ತಿಗೆ ಹಿಡಿಯುತ್ತಾಳೆ. 1 ಎಕರೆ ಭತ್ತ ನಾಟಿಗೆ 2000 ರೂ. ದಿನವೊಂದರಲ್ಲಿ 5ಎಕರೆ ಭತ್ತ ನಾಟಿ ಮಾಡುವುದಿದೆ. ದಿನವೊಂದರ ದುಡಿಮೆಯಲ್ಲಿ ಒಬ್ಬರ ಸಂಪಾದನೆ ಕನಿಷ್ಠ 400-500 ರೂಗಳೆಂದು ಪತ್ರಿಕೆಯೊಂದರಲ್ಲಿ ಇತ್ತೀಚೆಗೆ ವರದಿಯಾಗಿತ್ತು.

ಈ ಭಾಗದ ನೀರಾವರಿ ಪ್ರದೇಶಗಳಲ್ಲಿ ಕಾರ್ಮಿಕರ ಬೇಡಿಕೆ ಹೆಚ್ಚಾಗಿದೆ. ದೊಡ್ಡ ದೊಡ್ಡ ನಗರಗಳಿಗೆ ಜನರು ವಲಸೆ ಹೋಗಿರುವುದರಿಂದಾಗಿ ಕಾರ್ಮಿಕರ ಕೊರತೆ. ಕೊರತೆ ತುಂಬಲು ಮಕ್ಕಳ ಮೂಲಕ ಕೆಲಸ ಮಾಡಿಸುವ ಪ್ರವೃತ್ತಿ ಮಾಲಿಕರಲ್ಲಿ ಹೆಚ್ಚಾಗುತ್ತಿದೆ. ಬಡತನ ಎಂಬ ಏಕೈಕ ಸಮಸ್ಯೆಯನ್ನು ಮುಂದಿಟ್ಟು ಮಕ್ಕಳಿಂದ ದುಡಿಸಿಕೊಳ್ಳುವ ಪ್ರವೃತ್ತಿ ಪಾಲಕರದು. ಆದರೆ ಇದಕ್ಕೆ ಕೊನೆ ಎಂದು? ಮಕ್ಕಳು ಶಾಲೆಯಿಂದ ಹೊರಗುಳಿಯುವ ವ್ಯಾಪಕ ಸಮಸ್ಯೆಗೆ ಹತ್ತು ಹಲವಾರು ಕಾರಣಗಳು, ಮುಖಗಳಿರುವುದು ವಾಸ್ತವ. ಹೈದರಾಬಾದ್ ಕರ್ನಾಟಕದ ಈ ಬೌಗೋಳಿಕ ಪ್ರದೇಶದಲ್ಲಿ ಮಕ್ಕಳ ದುಡಿಮೆಗೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಹಿನ್ನೆಲೆ ಕೂಡಾ ಇದೆ. ಆದರೆ ಇದರೊಂದಿಗೆ ಇಚ್ಚಾಶಕ್ತಿಯ ಕೊರತೆ ಕೂಡಾ ಇಲ್ಲವೇ? ರಾಜ್ಯದಾದ್ಯಂತ ಶಾಲೆಯಿಂದ ಹೊರಗುಳಿದ ಮಕ್ಕಳ ದಾಖಲಾತಿ ಕಾರ್ಯ ಪೂರ್ಣಗೊಂಡು 1,70,523 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆಂಬ ಅಂಕಿ ಅಂಶಗಳನ್ನು ಇಲಾಖೆ ನೀಡಿದೆ. ಮಗುವನ್ನು ಪತ್ತೆಹಚ್ಚಿ ಮರಳಿ ಶಾಲೆಗೆ ಸೇರಿಸುವ ಕಾರ್ಯ ಈಗ ಚಾಲನೆ ಪಡೆದಿದೆ. ಆದರೆ ಶಾಲೆಗೆ ಸೇರುವ ಮಗು ಶಾಲೆಯಲ್ಲಿ ಉಳಿದುಕೊಳ್ಳುವ ಕಡೆಗೆ ವ್ಯಾಪಕ ಗಮನ ಹರಿಸದಿದ್ದಲ್ಲಿ ಈ ಎಲ್ಲಾ ಪ್ರಯತ್ನಗಳು ಫಲ ನೀಡೀತೇ? ದಾಖಲಾತಿ, ಹಾಜರಾತಿ, ಉಳಿಕೆ ಈ ಮೂರೂ ಅಂಶಗಳಿಗೆ ಸಮಾನ ಶುಶ್ರೂಷೆ ನೀಡಿದಾಗ ಮಾತ್ರ ರೋಗ ಮುಕ್ತವಾಗಬಹುದೇನೋ.ಈ ಸಂದರ್ಭದಲ್ಲಿ ಇತ್ತೀಚೆಗೆ ಸುರಪುರದಿಂದ ಕೇರಳಕ್ಕೆ ಕ್ಷೇತ್ರಭೇಟಿಗೆ ಹೋಗಿಬಂದ ಎಸ್ ಡಿ ಎಂ ಸಿ ಮತ್ತು ಗ್ರಾಮ ಪಂಚಾಯತಿ ಅದ್ಯಕ್ಷರ ಮಾತುಗಳು ನೆನಪಾಗುತ್ತದೆ. **"ನಾವು ಅವರಂತಾಗಲು 100 ವರ್ಷಗಳಾದರೂ ಬೇಕು"**

ನಾನೊಂದು ಪ್ರಶ್ನೆ ಕೇಳಲೇ?
ಕೃತಿ ವಿಮರ್ಶೆ

❤ ಎಸ್. ವಿ. ಮಂಜುನಾಥ್

'ನಾನೊಂದು ಪ್ರಶ್ನೆ ಕೇಳಲೇ'– ಇದು ನನ್ನ ವೃತ್ತಿ ಗುರು ಶ್ರೀ ವಿ. ಕೆ. ತಾಳಿತ್ತಾಯ ಅವರು ಬರೆದಿರುವ, 95 ಪುಟಗಳ ಚಿಕ್ಕದಾದರೂ ಆಸಕ್ತಿದಾಯಕ ಕೃತಿ. 2012ರಲ್ಲಿ ನವಕರ್ನಾಟಕ ಪಬ್ಲಿಕೇಶನ್‌ನಿಂದ ಪ್ರಕಟವಾಗಿರುವ, 12 ಚಿಕ್ಕ ಅಧ್ಯಾಯಗಳನ್ನು ಹೊಂದಿದ, ಸರಳ, ಆಕರ್ಷಕ ಚಿತ್ರಗಳನ್ನು ಒಳಗೊಂಡ ಸುಂದರ ವಿನ್ಯಾಸದ ಕೃತಿ.

ಶಿಕ್ಷಣ ಕ್ಷೇತ್ರದಲ್ಲಿ ಆಮೂಲಾಗ್ರ ಬದಲಾವಣೆ ತರಲು ಕಟಿಬದ್ಧರಾಗಿರುವ ನಮಗೆ ಈ ಕೃತಿಯ ಓದು ಅತ್ಯಂತ ಉಪಯುಕ್ತವೆನಿಸಿದ್ದೇ ಈ ಕಿರು ವಿಮರ್ಶಾ ಲೇಖನಕ್ಕೆ ಮೂಲ ಕಾರಣ.

'ನಾನೊಂದು ಪ್ರಶ್ನೆ ಕೇಳಲೇ?' ಕುತೂಹಲಕಾರಿಯಾಗಿ ಓದಿಸಿಕೊಂಡು ಹೋಗುವ ಕೃತಿ. ಶೀರ್ಷಿಕೆ ಅತ್ಯಂತ ಅರ್ಥಗರ್ಭಿತವಾಗಿದೆ. ಕೃತಿ ಚೆಂದವಾಗಿ ಮೂಡಿ ಬಂದಿದೆ. ಎಳೆಯ ಮಕ್ಕಳ ಮನಸ್ಸಿನಲ್ಲಿ, ಅಷ್ಟೇಕೆ, ದೊಡ್ಡವರ ಮನಸ್ಸಿನಲ್ಲಿ ಕೂಡ ಆಗಿಂದಾಗ್ಗೆ ಮೂಡಿ ಬರುವ ಗಹನವಾದ ಪ್ರಶ್ನೆಗಳು/ಸವಾಲುಗಳ ಬಗ್ಗೆ ತಿಳಿಯಾದ, ಆದರೆ ತರ್ಕಬದ್ಧವಾದ ಚರ್ಚೆ/ಜಿಜ್ಞಾಸೆ/ವ್ಯಾಖ್ಯಾನ ಇದೆ; ಅದರಲ್ಲೂ ಮೊಮ್ಮಕ್ಕಳು–ಅಜ್ಜನ ನಡುವಿನ ಕುತೂಹಲಭರಿತ ಸಂವಾದದ ರೀತಿಯಲ್ಲಿ ಮೂಡಿಬಂದಿರುವ ಶೈಲಿ ಮೊದಲಿನಿಂದ ಕಡೆಯವರೆಗೂ ನನ್ನ ಆಸಕ್ತಿಯನ್ನು ಹಿಡಿದಿರಿಸಿಕೊಂಡಿತು.

ಪರಂಪರಾಗತವಾಗಿ ಉಪನಿಷತ್ತುಗಳ ಕಾಲದಿಂದಲೂ 'ಸತ್ಯಾನ್ವೇಷಣೆ'ಗೆ ಪ್ರಶ್ನೋತ್ತರ ಹಾದಿಯನ್ನೇ ಗುರು–ಶಿಷ್ಯರು ಬಳಸಿಕೊಂಡಿದ್ದರು. ಇಂದಿನ ವೈಜ್ಞಾನಿಕ ಯುಗದಲ್ಲಿ ಈ ಮಾರ್ಗದ ಪ್ರಸ್ತುತತೆ ಬಗ್ಗೆ ಈ ಕೃತಿ ಪರಿಣಾಮಕಾರಿಯಾಗಿ ಓದುಗರ ಗಮನವನ್ನು ಸೆಳೆಯುತ್ತದೆ.

ಸತ್ಯ–ಸುಳ್ಳು, ನ್ಯಾಯ–ನೀತಿ ಮುಂತಾದ ನೈತಿಕ ಮೌಲ್ಯಗಳ ಬಗ್ಗೆ ದೊಡ್ಡವರಾಗಿ ನಾವು ಎಳೆಯರೊಂದಿಗೆ ಚರ್ಚಿಸುವಾಗ ಸಾಮಾನ್ಯವಾಗಿ 'ಈಗ ಕಾಲ ಕೆಟ್ಟು ಹೋಗಿದೆ, ನಮ್ಮ ಕಾಲದಲ್ಲಿ ಹೀಗಿರಲಿಲ್ಲ' ಎಂಬ ಕಾಲಘಟ್ಟಗಳ ನಡುವಿನ ತುಲನಾತ್ಮಕ ವಿಮರ್ಶಾ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತೇವೆ. 'ಮೌಲ್ಯ ನಿಷ್ಕರ್ಷೆ' ಮಾಡಲು ಕಾತರರಾಗಿರುತ್ತೇವೆ. ಇದಕ್ಕೆ ಹೊರತಾಗಿ ಮಕ್ಕಳಿಗೆ ನೇರವಾಗಿ ಸಂಬಂಧಪಡುವ ಅವರ ದೈನಂದಿನ ಪ್ರಪಂಚದಿಂದಲೇ ಆಯಾ ಘಟನಾವಳಿಗಳಿಗೆ (ಉದಾ: ಗಲ್ಲಿಯಲ್ಲಾಡುವ ಕ್ರಿಕೆಟ್, ತರಗತಿ ಕೋಣೆಯಲ್ಲಿ ಅಧ್ಯಾಪಕರ ಪಾಠ ಕೇಳುವ ಸಂದರ್ಭ, ಸ್ನೇಹಿತರಿಬ್ಬರ ನಡುವಿನ ಜಗಳ ಇತ್ಯಾದಿ) ಸಂಬಂಧಿಸಿದಂತೆ ಮೂಡಿಬರುವ ಸಹಜ ಪ್ರಶ್ನೆಗಳಿಗೆ ಅವರಿಗೆ ಮುಟ್ಟುವಂತೆ ಆದರೆ ತಾತ್ವಿಕ ನೆಲೆಗಟ್ಟನಲ್ಲೇ

ಉತ್ತರಗಳನ್ನು ಹುಡುಕುವ ಪ್ರಯತ್ನ ಆಸಕ್ತಿದಾಯಕವಾಗಿದ್ದು, 'ಬೌದ್ಧಿಕ' ಕುತೂಹಲವನ್ನು ಹೆಚ್ಚಿಸುತ್ತದೆ. ಮುಖ್ಯವಾಗಿ



ಕಿರಿಯರಿಗೆ ನೇರವಾಗಿ ಬೋಧಿಸದೆ ಮುಖ್ಯವಾದ ಪ್ರಶ್ನೆಗಳಿಗೆ ಅವರೇ ಚಿಂತನಶೀಲರಾಗಿ ಪರಿಹಾರ ಕಂಡುಕೊಳ್ಳಲು ಅವರನ್ನು ಪ್ರಯತ್ನಕ್ಕೆ ಹಚ್ಚುವ ಪರಿ ಹಿರಿಯರಿಗೆ, ಅದರಲೂ ತಮ್ಮ ಮಕ್ಕಳ ಭವಿಷ್ಯತ್ತಿನ ಬಗೆಗಿನ ಮಹತ್ವದ ನಿರ್ಧಾರಗಳನ್ನು ತಾವೇ ಹೆಚ್ಚು ತೆಗೆದುಕೊಳ್ಳಬೇಕೆಂಬ ಕಾತರತೆ ತೋರುವ ಇಂದಿನ ಪೋಷಕರಿಗೆ ಹೆಚ್ಚು ಉಪಯುಕ್ತವಾಗುತ್ತದೆ ಎಂಬುದು ನನ್ನ ಅಭಿಮತ.

ಅತ್ಯಂತ ಪ್ರಖರ ವಿಚಾರಗಳನ್ನು ಜಿಜ್ಞಾಸೆಗೊಳಪಡಿಸುವಾಗಲೂ ಭಾರವಾದ ಪರಿಕಲ್ಪನೆಗಳನ್ನು ಬಳಸಲು ಹೋಗದೆ ಅದರ ತಿರುಳನ್ನು ಪ್ರಶ್ನೋತ್ತರ ವಿಧಾನದಲ್ಲಿಯೇ ಸುಲಲಿತವಾಗಿ

ತರಲಾಗಿದೆ. ಆಯಾ ವಿಷಯಕ್ಕೆ ಸಂಬಂಧಿಸಿದ ಅಧ್ಯಾಯದ ಕಡೆಯ ಭಾಗದಲ್ಲಿ ಮತ್ತೆ ಅದರ ಸಾರಾಂಶವನ್ನು ಅಜ್ಜನ ಸರಳ ಭಾಷೆಯಲ್ಲಿ ಮಂಡಿಸಿರುವುದು ಪ್ರತಿ ವಿಷಯವನ್ನು ಸ್ವತಂತ್ರವಾಗಿ ಅರಿಯುವಂತೆ ಮಾಡುತ್ತದೆ. ಅತ್ಯಂತ ಸೀರಿಯಸ್ ಆದ ವಸ್ತುವನ್ನು ಆರಿಸಿಕೊಂಡರೂ ಇಡೀ ಪುಸ್ತಕದಲ್ಲಿ ಲೇಖಕರ ಪ್ರಯತ್ನ ಇಂದಿನ ಜನಾಂಗದ ತರ್ಕಬದ್ಧ ಕಿರಿಯ ಸ್ನೇಹಿತರನ್ನು ಕುರಿತು ಆತ್ಮೀಯವಾಗಿ, ಆಯ್ದುಕೊಂಡ ವಿಷಯವನ್ನು ಎಳೆಎಳೆಯಾಗಿ ತೆರೆದಿಟ್ಟು ಅವರೇ ಅವರ ಬುದ್ಧಿಶಕ್ತಿಗೆ ತಕ್ಕಂತೆ ಅದನ್ನು ಪರಿಗ್ರಹಿಸುವಂತೆ ಅವರನ್ನು ತೊಡಗಿಸಿರುವುದು ಅವರ ಜಾಗರೂಕತೆಯ ನಿರ್ವಹಣೆಗೆ ಹಿಡಿದ ಕನ್ನಡಿಯಂತಿದೆ. ಲೇಖಕರು ಅನೇಕ ವರ್ಷಗಳಿಂದ ಅಧ್ಯಯನಶೀಲರಾಗಿ ಈ ವಿಷಯಗಳ ಅಂತಃಸತ್ವವನ್ನು ಸ್ವತಃ ಅಂತರ್ಗತ ಮಾಡಿಕೊಂಡು ಎಳೆಯರಿಗೆ ಆ ರಸಾಸ್ವಾದನೆಯ ಸವಿಯನ್ನು ಉಣಬಡಿಸುತ್ತಿರುವ ಕಥಾ ಹಂದರದ ರೀತಿ ಆಕರ್ಷಕವಾದದ್ದು.

ಈ ಪ್ರಕ್ರಿಯೆಯಲ್ಲಿ ವಿವಿಧ ಕ್ಷೇತ್ರಗಳ ಚಿಂತಕರ, ಸಾಧಕರ ತತ್ವ ಸಿದ್ಧಾಂತಗಳನ್ನೂ ಸಹ ಓದುಗರಿಗೆ ಪರಿಚಯಿಸಿರುವುದು ಇನ್ನೊಂದು ವಿಶೇಷ. ಸಾಕ್ರೆಟೀಸನ ಮೂಲಕ ತಾರ್ಕಿಕವಾಗಿ ಪ್ರಶ್ನಿಸುವ, ಆ ಮೂಲಕ ಪರೀಕ್ಷಿಸುವ ಅಗತ್ಯತೆಯನ್ನು; ವಿಕ್ಟರ್ ಫ್ರಾಂಕಲ್‌ನ ಉದಾಹರಣೆಯ ಮೂಲಕ ಅತ್ಯಂತ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಿಯೂ ಜೀವನದಲ್ಲಿ ಹಿರಿದಾದ ಉದ್ದೇಶವನ್ನು ಹೊಂದಿ ತೀವ್ರವಾದ ಕಹಿ ಸ್ವಾನುಭವವನ್ನು ಸಮಾಜದ ಒಳಿತಿಗಾಗಿ ಪರಿವರ್ತಿಸುವುದನ್ನು; ಅರಿಸ್ಟಾಟಲ್ ಪ್ರತಿಪಾದಿಸಿದ 'ನ್ಯಾಯ' ಚಿಂತನೆಯನ್ನು; 1789ರ ಚಾರಿತ್ರಿಕ ಘಟನೆಯಾದ ಫ್ರಾನ್ಸ್‌ನ ಕ್ರಾಂತಿಯ ಮುನ್ನ ಘೋಷಿಸಲಾದ ಮಾನವ ಹಕ್ಕುಗಳ ಘೋಷಣೆಯ ಪ್ರಾಮುಖ್ಯತೆಯನ್ನು; 20ನೇ ಶತಮಾನದ ಮೊದಲ ಭಾಗದಲ್ಲಿ ಐನ್‌ಸ್ಟೀನ್ ವಿಜ್ಞಾನ ಮತ್ತು ವಿಜ್ಞಾನಿಗಳ ಬಗ್ಗೆ ಮಾಡಿದ ಭಾಷಣದ ತಾತ್ಪರ್ಯ – ಹೀಗೆ ಅನೇಕ ಉದಾಹರಣೆಗಳು, ಶ್ರೇಷ್ಠ ಚಿಂತಕರ ವಿಚಾರಧಾರೆಯ ಪ್ರಸ್ತುತಿ ಆಯ್ಕೆಯ ವಿಷಯಕ್ಕೆ ಪೂರಕವಾಗಿದ್ದು ಮೂಲ ಆಶಯದ ಪ್ರತಿಪಾದನೆಯನ್ನು ಪುಷ್ಟೀಕರಿಸುತ್ತದೆ. ಮೇಲಾಗಿ ಈ ಚಿಂತಕರು ಪ್ರತಿಪಾದಿಸಿದ ಸಿದ್ಧಾಂತಗಳನ್ನು ಆಸಕ್ತರು ಇನ್ನೂ ಆಳವಾಗಿ ಅಭ್ಯಸಿಸಲು ಪ್ರೇರಣೆಯನ್ನೊದಗಿಸುತ್ತದೆ.

ಸೌಂದರ್ಯ ಪ್ರಜ್ಞೆಗೆ ಸಂಬಂಧಿಸಿದ ಅಧ್ಯಾಯ ಇನ್ನಿತರ ವಿಷಯಗಳಿಗಿಂತ ಭಿನ್ನವಾಗಿದ್ದು, ನವಿರಾದ ಸೇರ್ಪಡೆಯಾಗಿದೆ. ಕಡೆಯಲ್ಲಿ ಇತಿಹಾಸದ ಅಧ್ಯಯನದಿಂದ ಸಮಾಜಕ್ಕೆ ಹೇಗೆ ಉಪಯೋಗವಾಗುತ್ತದೆ ಮತ್ತು ಮುಕ್ತ ಸಮಾಜವನ್ನು ನಿಜವಾದ ಅರ್ಥದಲ್ಲಿ ಕಟ್ಟಬೇಕಾದರೆ ಜನರ, ಅದರಲ್ಲೂ ಯುವಕರ ಹೊಣೆಗಾರಿಕೆಯ ಮಹತ್ವವನ್ನು ಒತ್ತಿ ಹೇಳಿರುವುದು ನಿಜಕ್ಕೂ ಸಮಾಜದ ದೀರ್ಘಕಾಲಿಕ ಹಿತದೃಷ್ಟಿಯಿಂದ ಅತ್ಯಗತ್ಯವಾದ ಅಪೇಕ್ಷೆಯಾಗಿದೆ.

ಮೇಲಿನ ಅಂಶಗಳು ನನಗೆ ಮೆಚ್ಚುಗೆಯಾದರೂ ಒಂದು ದೊಡ್ಡ ಪ್ರಶ್ನೆ ನನ್ನನ್ನು ಕಾಡತೊಡಗಿತು. ಅದೆಂದರೆ, ಶಿಕ್ಷಣದ ಮೂಲ ಆಶಯಕ್ಕೆ ತದ್ವಿರುದ್ಧವಾಗಿ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ನಡೆಸಲಾಗುತ್ತಿದ್ದು, ವೈಚಾರಿಕತೆಯನ್ನು, ಮನನಶೀಲತೆಯನ್ನು ಕ್ಷೀಣಿಸುವ, ಜ್ಞಾನವನ್ನು ಜ್ಞಾನಕ್ಕಾಗಿಯೇ ಅರಸುವ ಬದಲು ಎಲ್ಲವನ್ನೂ ವ್ಯಾಪಾರಿ ಮನೋಭಾವದಿಂದಲೇ ನೋಡುವ, 'ಲಾಭಕ್ಕಾಗಿಯೇ ಜ್ಞಾನ'ವನ್ನು ಹೊಂದುವ ಇಂದಿನ ಸಮಾಜದಲ್ಲಿ ಪೋಷಕರು, ಶಿಕ್ಷಕರು ಮತ್ತು ಸಮಾಜ, ಎಳೆಯರ ಕುತೂಹಲವನ್ನು ಅರಳಿಸುವ ಬದಲು ಅದನ್ನು ಚಿವುಟಿ ಹಾಕುವ ವ್ಯವಸ್ಥಿತ ಪ್ರಯತ್ನ ನಡೆಯುತ್ತಿರುವ ಸಂದರ್ಭದಲ್ಲಿ ಕೃತಿಯಲ್ಲಿ ಬಳಸಿಕೊಂಡಿರುವ ಜಿಜ್ಞಾಸೆಯ ಶೈಲಿ, ರಭಸವಾಗಿ ಒಂದೇ ದಿಕ್ಕಿನತ್ತ ಸಾಗುತ್ತಿರುವ ಪ್ರವಾಹದೆದುರು ಈಜುವ ಧೀರೋಧಾತ್ತ ಪ್ರಯತ್ನದಂತಿದೆ. ಸಮಾಜದ ಒಳಿತಿನ ದೃಷ್ಟಿಯಿಂದ ಈ ಕೃತಿ ಹೊರಬಂದಿರುವುದು ಸಂದರ್ಭೋಚಿತವಾಗಿದೆ.

ಅಂತಿಮವಾಗಿ ಈ ಪ್ರೌಢ ಲೇಖನಗಳ ಮೂಲಕ ಲೇಖಕರು ತಮ್ಮ ಅಮೂಲ್ಯ ಅನುಭವಗಳು, ವಿಚಾರಗಳನ್ನು ಸರಳ ವಿಧಾನದಲ್ಲಿ ಸಂವಹನಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎನ್ನಿಸಿತು. ಸರಳ, ನವಿರಾದ ಭಾಷೆ, ಸಂವಹನ ವಿಧಾನ ಈ ಕೃತಿಯ ಮೌಲ್ಯವನ್ನು ಹೆಚ್ಚಿಸಿವೆ. ಈ ಕೃತಿಯ ಓದು ನಮ್ಮನ್ನು ಆಳವಾದ ಚಿಂತನೆಗೆ ಹಚ್ಚುವುದರಲ್ಲಿ ಅನುಮಾನವಿಲ್ಲ.

What Got You Here Won't Get You There!

Book Review

Praveen Kumar G

This book "What Got You Here, Won't Get You There" was recommended by my mentor Gurukirandeep Singh (GD) during my stint at Dell. One of the few business books which left an everlasting impression on me.



This is the first book I have read of Marshall Goldsmith, and it most certainly will not be the last. From its title one could think that this is one of the fluffy motivational "change yourself overnight" books. In reality, it is anything but that, it's grounded and well written book that focuses on the problems which come from moving up the leadership ladder while still retaining old habits.

As the title indicates, the very qualities that get people promoted and make them successful can often be the ones that cause them trouble in their new positions and responsibilities. The biggest impact people can make in their ongoing career success comes in the form of behavioral changes.

'What Got You Here, Won't Get You There!' holds the basic premise that there are a handful of workplace habits that often keep successful people from becoming more successful. The author, Marshall Goldsmith, seeks to identify those habits and help you overcome them so you can make the next big leap in whatever you are planning to do with your life. While this book has a heavy skew towards management, there is a lot of meat that applies no matter what you're doing. Let's take a look at the 20 workplace habits that is holding you back.

- *Habit – 1*: Winning too much.
  The need to win at all costs and in all situations – when it matters, when it doesn't, and when it is totally beside the point.
- *Habit – 2*: Adding too much value.
  The overwhelming desire to add our two cents to every discussion.
- *Habit – 3*: Passing Judgment.
  The need to rate others and impose our standards on them.
- *Habit – 4*: Making destructive comments.
  The needless sarcasms and cutting remarks that we think make us sound sharp and witty.
- *Habit – 5*: Starting with "No," "But," or "However."
  The overuse of these negative qualifiers which secretly say to everyone, "I'm right, you're wrong."
- *Habit – 6*: Telling the world how smart we are.
  The need to show people we are smarter than they think we are.
- *Habit – 7*: Speaking when angry.
  Using emotional volatility as a management tool.
- *Habit – 8*: Negativity, or "Let me explain why that won't work.
  The need to share our negative thoughts even when we weren't asked.

- *Habit – 9*: Withholding Information.
  The refusal to share information in order to maintain an advantage over others.
- *Habit – 10*: Failing to give proper

  recognition.
  The inability to praise and reward.
- *Habit – 11*: Claiming credit that we don't deserve.
  The most annoying way to overestimate our contribution to any success.
- *Habit – 12*: Making excuses.
  The need to reposition our annoying behavior as a permanent fixture so people excuse us for it.
- *Habit – 13*: Clinging to the past.
  The need to deflect blame away from ourselves and onto events and people from our past; a subset of blaming everyone else.
- *Habit – 14*: Playing Favorites.
  Failing to see that we are treating someone unfairly.
- *Habit – 15*: Refusing to express regret.
  The inability to take responsibility for our actions, admit we are wrong, or recognize how our actions affect others.
- *Habit – 16*: Not listening.
  The most passive–aggressive form of disrespect for colleagues.
- *Habit – 17*: Failing to express gratitude.
  The most basic form of bad manners.
- *Habit – 18:* Punishing the messenger.
  The misguided need to attack the innocent who are usually only trying to help us.
- *Habit – 19*: Passing the buck.
  The need to blame everyone but ourselves.
- *Habit – 20*: An excessive need to be "me".
  Exalting our faults as virtues simply because they are who we are. That's an impressive and insightful list of criticisms. Goldsmith goes on to devote a few pages to explain each habit in detail which is very insightful and interesting, but I was most bowled over by the list of habits.

Lot of you must have encountered many "To Do" lists, here's your first encounter to "Don't Do It!" list. Great book for anyone who wants to better themselves at work, at home and at life. Highly recommended!

ಅಕ್ಷಯ ತೃತೀಯ ಮತ್ತು ಅವಳೊಂದಿಗೆ ಸಾಗಿ ಬಂದ ಹಾದಿಯ ಗುಂಟಾ...

♥ ಷಡಕ್ಷರಿ.ತರಬೇನಹಳ್ಳಿ

ಆ ದಿನವಿನ್ನೂ ನನಗೆ ನೆನಪಿದೆ. ಅವತ್ತು ನನ್ನಪ್ಪ ಅಮ್ಮ ನನಗೆ ಮೂರು ಮನೆಯಲ್ಲಿ ಹೆಣ್ಣು ನೋಡುವ ಕಾರ್ಯಕ್ರಮ ನಿಗದಿಪಡಿಸಿದ್ದರು. ಆದರೆ ನಾನು ಮೊದಲೇ ಅವರಿಗೆ ತಿಳಿಸಿದ್ದಂತೆ ಒಂದು ಹುಡುಗಿಯ ಚಿತ್ರ ನೋಡಿ, ಅವರ ಓದಿನ ಹಿನ್ನೆಲೆ ತಿಳಿದು, ಆ ಹುಡುಗಿಯ ಮನೆಗೆ ಮಾತ್ರ ಹೋಗುವುದಾಗಿ ಒಪ್ಪಿಸಿದ್ದೆ. ಅವಳ ಅಪ್ಪ ನನಗಾಗಿ ಅವರೂರಿನ ದೇವಸ್ಥಾನದ ಬಳಿ ಕಾಯುತ್ತಿದ್ದರು. ಅವರೊಡಗೂಡಿ ಅವಳ ನಿಜ ರೂಪವ ನೋಡಲು ಅವರ ತೋಟದ ಮನೆಗೆ ನಡೆದೆ.

ಅವಳ ಮನೆಯಲ್ಲಿ ಅವಳ ಕೈ ಚಳಕ ಎಲ್ಲೆಲ್ಲಿ ಕಾಣಬಹುದೆಂದು ನಾನು ಸುತ್ತಾ ಮುತ್ತಾ ನೋಡುತ್ತಿದ್ದೆ. ಆ ಗೋಡೆಯ ಮೇಲಿದ್ದ ಪೊಮೇರಿಯನ್ ನಾಯಿ ಮರಿಗಳ ದೊಡ್ಡ ಪೋಸ್ಟರ್ ಹೇಳಿತು ಅವಳು ನಾಯಿ ಪ್ರೇಮಿ ಅಂತಾ. ನನಗೆ ಕಾಫಿ ತಂದ ಅವಳ ಕಾಲನ್ನು ಸುತ್ತಿ ಸುತ್ತಿ ಅವಳು ನಡೆಯಲೂ ತೊಂದರೆ ಕೊಡುತ್ತಿದ್ದ ಆ ಹುಲಿ ಬಣ್ಣದ ಬೆಕ್ಕು ಹೇಳಿತು ಅವಳ ಮನದಿಂಗಿತವ.ಅಲ್ಲೇ ಜೋಡಿಸಿಟ್ಟಿದ್ದ ಕ್ಯಾಸೆಟ್ಟುಗಳ ಸ್ಟಾಂಡ್ ಹೇಳಿತು ಅವಳ ಸಂಗೀತದ ಹುಚ್ಚನ್ನ. ಮನೆಯ ಸುತ್ತಮುತ್ತ ಇರುವ ತೋಟವ ತಿರುಗಾಡಲು ಹೋದವನಿಗೆ ಅಲ್ಲಿ ಕಂಡ ಹಣ್ಣಿನ, ಹೂವಿನ ಗಿಡಗಳು ಅವಳೊಲವ ಸಾರಿದವು.ಮನೆಯ ಕೊಟ್ಟಿಗೆಯಲ್ಲಿದ್ದ ಹಸುಗಳ ಮುಖ ಹೇಳಿತು ಅವಳ ಪ್ರೀತಿಯ ಆಳವನ್ನ. ಎಲ್ಲ ನೋಡಿ ಒಳಗೆ ಬಂದವನಿಗೆ ಅವಳೇ ಮಾಡಿದ ಆಲೂ ಪರೋಟ ನೋಡಿ ಒಮ್ಮೆಗೇ ಅಚ್ಚರಿಯಾಯ್ತು. ಮೊದಲು ಬಾಯಲ್ಲಿ ನೀರೂರಿದ್ದನ್ನು ಸುಧಾರಿಸಿಕೊಂಡು ನಿಧಾನವಾಗಿ ಅದರ ಸವಿಯ ಚಪ್ಪರಿಸಿದೆ. ಈ ಹಳ್ಳಿಯಲ್ಲಿದ್ದರೂ ಪಕ್ಕದ ಪಟ್ಟಣದ ಹೋಟೆಲಿನ ರುಚಿ ಕೊಟ್ಟ ಅವಳ ಬುದ್ಧಿವಂತಿಕೆಗೆ ಮಾರು ಹೋದೆ. ಮರುಮಾತನಾಡದೆ ಅವಳೊಂದಿಗೆ ಮಾತನಾಡಲು ಅವರಪ್ಪನ ಸಮ್ಮತಿ ಕೇಳಿದೆ.

ನಾನು ನನ್ನೆಲ್ಲಾ ಕನಸುಗಳನ್ನು, ಮಿತಿಗಳನ್ನೂ,ಪ್ರೀತಿ, ರೀತಿ, ನೀತಿ,ಮುಂದಿನ ದಿನಗಳನ್ನೂ ಅವಳಿಗೆ ತಿಳಿಸಿ ಹೇಳಿದೆ. ಎಲ್ಲವನ್ನೂ ಸಮಾಧಾನವಾಗಿ ಕೇಳಿಸಿಕೊಂಡ ಅವಳಿಗೆ ನಿಮ್ಮದೇನಾದರೂ ಪ್ರಶ್ನೆ ಇದೆಯಾ ಅಂದೆ. ಅವಳು ಕೇಳಿದ ಮೊದಲ ಪ್ರಶ್ನೆಗೆ ನಾನು ಬೋಲ್ಡ್ ಆಗಿಹೋದೆ. “ನಿಮ್ಮ ಸ್ಯಾಲರೀ ಎಷ್ಟು? ಅಂದವಳು ವಿಕೆಟ್ಟಿಗೆ ಎಸೆದ ನೇರ ಹಿಟ್ ಗೆ ನಾನು ಮೂಕ ವಿಸ್ಮಿತಾ! ☺ ☺ ☺



ಮನೆಯಿಂದಾ ಹೊರಟವನಿಗೆ ಮತ್ತೆ ಇದೇ ಮನೆಗೆ ಅಳಿಯನಾಗಿ ಬರುವುದು ನನಗೆ ನಿಶ್ಚಯವಾಗಿತ್ತಾದ್ದರಿಂದಾ ಈಗ ಹೋಗಿ ಮತ್ತೆ ಬರುವೆ ಎಂದು ಅವಳಿಗೆ ತಿಳಿಸಿದೆ. ಅವಳು ಕಣ್ಣಲ್ಲೇ ಬನ್ನಿ ಕಾಯುತ್ತಿರುತ್ತೇನೆ ಅಂದು ಒಪ್ಪಿಗೆ ಸೂಚಿಸಿದಳು. ಅವಳ ಅಪ್ಪನೊಂದಿಗೆ ನನ್ನ ಮುಂದಿನ ದಿನಗಳ ಕನಸುಗಳನ್ನು ಹೇಳಿ ಅದು ಅವಳಿಗೂ ಇಷ್ಟವೋ ಇಲ್ಲವೋ ಮತ್ತೊಮ್ಮೆ ತಿಳಿದುಕೊಳ್ಳಲು ತಿಳಿಸಿ ಹೊರಟೆ. ಇದನ್ನೆಲ್ಲಾ ಮರೆತು ನಾನು ನನ್ನ ಕೆಲಸದ ನಿಮಿತ್ತ ಕನ್ಯಾಕುಮಾರಿಯಲ್ಲಿದ್ದವನಿಗೆ ನನ್ನ ಸೋದರ ಮಾವ ಫೋನಾಯಿಸಿ ಮುಂದಿನ ಬಾನುವಾರ ನಿಶ್ಚಿಥಾರ್ಥವಿದೆ ತಪ್ಪಿಸಿಕೊಳ್ಳಬೇಡವೆಂದಾಗ ಅವಳು ನನ್ನಬಾಳಿನ ಕನಸಿನೊಳಗೆ ಬಂದಳು.

ನನ್ನೊಂದಿಗೆ ಅವಳು ಸಪ್ತಪದಿ ತುಳಿದ ದಿನದ ನೆನೆಪು ಇನ್ನೂ ಕಣ್ಣಿಗೆ ಕಟ್ಟಿದಂತಿದೆ.ಹಿಂದಿನ ದಿನ ಅವಳ ಬಳಗದೊಂದಿಗೆ ಬಂದವಳೇ ಅವರೆಲ್ಲರ ಯೋಗ ಕ್ಷೇಮದ ಉಸ್ತುವಾರಿ ಅವಳೇ ವಹಿಸಿಕೊಂಡಿದ್ದಳು. ಅವಳು ನನಗೇ ನೇರವಾಗಿ ಮಾತನಾಡಿ ಅವರಿಗೆ ಯಾವುದರಲ್ಲೂ ಕೊರತೆಯಾಗದಂತೆ ನೋಡಿಕೊಳ್ಳಲು ತಿಳಿಸಿದ್ದು ಅವಳು ನನ್ನ ಮನೆಗೆ ಬರುವ ಮೊದಲೇ ನಮ್ಮ ಮನೆಯ ಬಗ್ಗೆ ವಹಿಸಿದ್ದ ಕಾಳಜಿಯ ದ್ಯೋತಕವಾಗಿತ್ತು. ನಾನು ಅವಳನ್ನು ದೇವಸ್ಥಾನದಿಂದ ನಮ್ಮ ಮನೆಗೆ ಬರಮಾಡಿಕೊಳ್ಳಲು ಹೋದಾಗ ಅವಳು ನನ್ನನ್ನು ಅಷ್ಟೂ ಜನರ ಎದುರಿಗೆ ನೋಡಲು ನಾಚಿದ್ದು, ಆದರೂ ಬಿಡದೇ ಕದ್ದು ನೋಡಿದ್ದು, ಆ ಕಣ್ಣಲ್ಲೇ ನನಗೆ ಅವಳ ಖುಷಿಯನ್ನು ಹಂಚಿದ್ದು ಈಗಲೂ ಮರೆಯಲಾಗಿಲ್ಲಾ.

ಮನೆಯ ಹೊಸ್ತಿಲುದಾಟಿ ಒಳಬಂದ ಅವಳು ನನ್ನ ಮನೆ ಮನ ಎರಡನ್ನೂ ಬೆಳಗಲಾರಂಭಿಸಿದಳು. ನಾವಿಬ್ಬರೂ ಎರಡು ವರ್ಷ ಹಾಯಾಗಿರಬೇಕೆಂಬ ನಮ್ಮ ನಿರ್ಧಾರಕ್ಕೆ ಕಟ್ಟುಬಿದ್ದಾಗ ಹೆಚ್ಚು ಮುಜುಗರ ಮತ್ತು ಹಲವು ಕುತೂಹಲೀ ಹೆಂಗಸರ ಪ್ರಶ್ನೆಗಳಿಗೆ ಉತ್ತರಿಸಬೇಕಾಗಿ ಬಂದಿದ್ದು ಅವಳು. ಕೊನೆಗೂ ಆ ಎರಡು ಕಠಿಣ ವರ್ಷ (ನಾವೇ ಇಷ್ಟಪಟ್ಟು ಆಹ್ವಾನಿಸಿಕೊಂಡಿದ್ದು!) ಕಳೆದು ಮೊದಲ ಮಗ ಹುಟ್ಟಿದಾಗ ನಮ್ಮ ಸಂತಸಕ್ಕೆ ಪಾರವಿರಲಿಲ್ಲಾ.

ಆ ಸಮಯದಲ್ಲಿ ಅವಳ ಬಳಿಯೇ ಇರಬೇಕೆಂದಿದ್ದರೂ ಕೆಲಸದ ನಿಮಿತ್ತ ದೂರವಿದ್ದವನಿಗೆ ಅವಳೇ ಫೋನಾಯಿಸಿ ಈ ಸಂತಸದ ಸುದ್ದಿ ಕೊಟ್ಟವಳಿಗೆ ಹೂ ಮುತ್ತು ಕೊಟ್ಟವನು ಒಂದು ಕ್ಷಣವೂ ನಿಲ್ಲಲಾರದೇ ಅಂದು ರಾತ್ರಿಯೇ ಅವಳ ಮನೆಗೆ ತಲುಪಿಬಿಟ್ಟಿದ್ದೆ. ಅವನ ಮೂಗು ಕಣ್ಣು ಕಿವಿಯಲ್ಲಿ ನನ್ನನ್ನೂ ಅವಳನ್ನೂ ಕಾಣುತ್ತಾ ಖುಷಿಪಟ್ಟಿದ್ದು ಅತಿ ಮಧುರ ಕ್ಷಣವಲ್ಲದೇ ಇರಲು ಸಾಧ್ಯವೇ. ಮೊದಲ ಮಗನ ಆರೈಕೆ ಪೋಶಣೆಯಲ್ಲಿ ಅವಳು ವಹಿಸಿದ ಜವಾಬ್ದಾರಿ ಅಸಾದಾರಣವಾದದ್ದು. ಅವಳು ಅವನನ್ನು ಬೆಳಸಿದ ರೀತಿ ಮಾತ್ರ ಅಮೋಘ. ಅವನಿಗೆ ಎರಡು ವರ್ಷವಾದದ್ದೇ ಗೊತ್ತಾಗದಂತೆ ಅವನನ್ನು ಬೆಳೆಸಿದ್ದಳು.

ಮತ್ತೊಮ್ಮೆ ಅದೇ ರೀತಿಯ ಎರಡನೆಯ ಸಿಹಿ ಸುದ್ದಿ ಮುಟ್ಟಿದಾಗಲೂ ಕೂಡ ನಾನು ದೂರವಿದ್ದೆ. ಅಂದೇ ರಾತ್ರಿ ಓಡಿ ಬಂದವನಿಗೆ ಮಗು ನೋಡೋದಕ್ಕಿಂತಾ ಅವಳನ್ನು ನೋಡುವುದೇ ನನಗೆ ಹೆಚ್ಚು ಇಷ್ಟವಾಗಿತ್ತು. ನನಗೆ ಅವಳೊಂದು ಅದ್ಭುತವೆಂಬಂತೆ ಕಂಡಳು. ಅವಳೊಳಗೆ ಇಂಥಹ ಸುಂದರ ಕಲಾಕೃತಿಗಳು ಹೊರಹೊಮ್ಮುವುದಾದರೂ ಹೇಗೆ! ಎಂಬ ವಿಸ್ಮಯದೊಳಗೆ ಕಳೆದುಹೋಗಿದ್ದೆ. ಈಗ ಇಬ್ಬರು ಮಕ್ಕಳ ಪೋಷಣೆಯ ಹೆಚ್ಚಿದ ಅವಳ ಜವಾಬ್ಧಾರಿಯ ಮುಂದೆ ನಾನು ತುಂಬಾ ಚಿಕ್ಕವನೆನಿಸಿದ್ದೆ.

ನನ್ನ ಕೆಲಸದ ನಿಮಿತ್ತ ಹೆಚ್ಚು ಸಮಯ ಹೊರಗೆ ಕಳೆಯುತ್ತಿದ್ದ ನಾನು ನನ್ನ ಮಕ್ಕಳಿಗೆ ಹೆಚ್ಚು ಸಮಯ ಕೊಡಲಾಗಲಿಲ್ಲವೆಂಬ ಕೊರತೆಯನ್ನು ಅವಳ ಹೆಚ್ಚಿನ ಸಮಯ ವಿನಿಯೋಗಿಸುವುದರ ಮೂಲಕವೇ ಸರಿದೂಗಿಸಿದ್ದ ಅವಳಿಗೆ ನಾನು ಕೃತಘ್ನನಾಗಿರ ಬೇಕಿರುವ ಅನಿವಾರ್ಯತೆ ಇಂದಿಗೂ ನನ್ನನ್ನು ಬಿಟ್ಟಿಲ್ಲಾ.

ಇಬ್ಬರು ಮಕ್ಕಳ ಅನೇಕ ಅವಶ್ಯಕತೆಗಳ ನಡುವೆ ನನ್ನ ಮತ್ತು ನನ್ನ ಕುಟುಂಬದಿತರರ ಎಲ್ಲಾ ಅವಶ್ಯಕತೆಗಳನ್ನೂ ಸಮಾನವಾಗಿ ಸರಿದೂಗಿಸುತ್ತಾ ನಮ್ಮ ಕುಟುಂಬದೊಳಗೊಂದಾಗಿ ನಮ್ಮ ಮನೆಯ ಎಲ್ಲಾ ರೀತಿ ರಿವಾಜುಗಳಿಗೆ ತನ್ನನ್ನು ಒಳಪಡಿಸಿಕೊಂಡು ಎಲ್ಲರಿಂದಲೂ ಸೈ ಎನ್ನಿಸಿಕೊಂಡಿರುವ ಅವಳ ಸಹನಾಬಲ ಅಘಾದ. ನನ್ನ ಅಕ್ಕಂದಿರು, ಅಮ್ಮ ಇವತ್ತು ನನ್ನನ್ನು ಬಿಟ್ಟರೂ ಬಿಟ್ಟಾರು ಆದರೆ ಅವಳ ಬಿಟ್ಟು ಇರಲಾರರು, ಅವಳೀಗ ಅಷ್ಟು ಅವರೆಲ್ಲರ ಅಚ್ಚು ಮೆಚ್ಚು.

ಅಪ್ಪ ಅಮ್ಮ ನನಗಾಗಿ ಉಳಿಸಿದ ಜಮೀನಿನಲ್ಲಿ ನಾವು ಮಾಡಿದ ಅನೇಕ ಕೃಷಿ ಸಂಭಂದಿತ ಚಟುವಟಿಕೆಗಳಲ್ಲೂ ಅವಳ ಕೊಡುಗೆ ಹೇರಳವಾಗಿದೆ. ನಮ್ಮ ಅಜ್ಜಿ ಕಾಲದಲ್ಲಿ ಸುತ್ತಮುತ್ತ ಹೆಸರುವಾಸಿಯಾಗಿದ್ದ ಪಶುಸಂಗೋಪನೆಯ ಹೆಮ್ಮೆಯ ನಮ್ಮ ಮನೆಗೆ ಹಸು ಮತ್ತು ಎಮ್ಮೆಗಳನ್ನು ಮತ್ತೆ ತರಿಸಿದ್ದೇ ಅವಳು. ತಂದೊಂದು ಹಸುವಿನಿಂದ 4 ಹಸು ಮಾಡಿದ್ದು, ಹಾಗೆಯೇ ಒಂದು ಮೇಕೆಯಿಂದ 4 ಮೇಕೆ ಮಾಡಿದ್ದು ಅದೂ 2 ವರ್ಷದೊಳಗೆ ಎಲ್ಲವೂ ಅವಳ ಕ್ರಿಯಾತ್ಮಕ ಮನಸ್ಸಿಗೆ ಸಾಕ್ಷಿ.ಕೃಷಿಯಲ್ಲಿ ಲಾಭ ನಷ್ಟಗಳಲ್ಲಿ ಏರುಪೇರಾಗುವ ಅನೇಕ ಸಾಧ್ಯತೆಗಳ ಒಳನೋಟ ಪಡೆದ ಅವಳು ಅದನ್ನು ಸರಿದೂಗಿಸಲು ಈ ಬಹುವಿಧಾನದ ಪದ್ದತಿಗೆ ಅಳವಡಿಸಿಕೊಂಡಿದ್ದು ಅವಳ ಜಾಣ್ಮೆಯ ದ್ಯೋತಕ.ಊರ ಮತ್ತು ಹೊರಗಿನ ಜನರು ತೋಟ ನೋಡಲು ಬಂದವರು ಆಡುವ ಮೆಚ್ಚುಗೆಯ ಮಾತಿಗೂ ಕೂಡ ಅವಳು ನನ್ನಮ್ಮನೊಂದಿಗೆ, ನನ್ನೊಂದಿಗೆ ಸಮಾನ ಅರ್ಹಳು.

ನಾನು ಇಬ್ಬರೂ ಮಕ್ಕಳ ಓದಿನ ನಿಮಿತ್ತ ಬೆಂಗಳೂರಿಗೆ ಬಂದಾಗಲೂ ಕೂಡ ಅವರೆಲ್ಲಾ ಅವಶ್ಯಕತೆಗಳನ್ನೂ ಪೂರೈಸುತ್ತಾ ಅವರಿಗೆ ಪ್ರತಿಕ್ಷಣ ನಾನಾಗಿ, ಅವಳಾಗಿ, ನನ್ನೂರಿನ ಮತ್ತು ಬೆಂಗಳೂರಿನ ಮನೆಯ ಎರಡೂ ಜವಾಬ್ದಾರಿಗಳನ್ನು ನಿರ್ವಹಿಸಿದ್ದೂ ಅವಳ ಧೈರ್ಯಕ್ಕೆ ಹಿಡಿದ ಕನ್ನಡಿ. ಎರಡೂ ಕಡೆ ಹೆಚ್ಚು ಸಮಯ ಮನೆಯಲ್ಲಿ ನಾನಿಲ್ಲದಿದ್ದರೂ ಎಲ್ಲೂ ಯಾರಿಗೂ ಕೊರತೆಯಾಗದಂತೆ, ಮನೆಯ ಜವಾಬ್ದಾರಿಗಳಿಗೆ ಕಿಂಚಿತ್ತೂ ಮುಕ್ಕಾಗದಂತೆ ನಿರ್ವಹಿಸಿದ್ದು ಅವಳ ಮನೆ ಮನಸ್ಸುಗಳ ಮ್ಯಾನೇಜ್ ಮೆಂಟ್ ಕೌಶಲ್ಯಕ್ಕೆ ಸಾಕ್ಷಿಯೇ ಬೇಕಿಲ್ಲದ ಪುರಾವೆ.

ನಾನು ಮತ್ತು ಅವಳು ಇದೇ ಅಕ್ಷಯ ತ್ರಿತೀಯದ ದಿನದಂದು ಸತಿ ಪತಿಗಳಾದ ದಿನದ ಸಂಭ್ರಮದ ಆಚರಣೆಯ ಖುಷಿಯಲ್ಲಿರುವ ನೆನಪಿಗಾಗಿ ….. ಆದಷ್ಟೂ ಬೇಗ ಬೆಂಗಳೂರಲ್ಲಿ ಮನೆಯೊಂದ ಕಟ್ಟುವ ಕನಸಿಗೆ ಇಬ್ಬರೂ ಈ ವರ್ಷದ ಈ ದಿನದಂದು ಸಂಕಲ್ಪಮಾಡಿದ್ದು ನಮ್ಮ ಜೀವನದ ಅತಿ ಮುಖ್ಯ ಮೈಲಿಗಲ್ಲಾಗಿದೆ…..

Cool Clicks

Bayalu Coordinators at your place for any query or support;

Bangalore: *Asha Rai – asha.rai@azimpremjifoundation.org*
Yadgir: Guru Moger – guru.moger@azimpremjifoundation.org
Mandya: *Gopalakrishna – gopalakrishna@azimpremjifoundation.org*
Gulbarga: Gururaj Nargund – gururaj.nargund@azimpremjifoundation.org

Pls write to us with your feedback to bayalu@azimpremjifoundation.org